# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **319**

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪೂರ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11.12.2024

| ಪ್ರಶ್ನೆ | | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಓಲಾ, ಉಬರ್, ರಾಪಿಡ್, ನಮ್ಮ ಯಾತ್ರಿ ಕ್ಯಾಬ್ ಮತ್ತು ಆಟೋ ಸೇವೆಗಳಲ್ಲಿ ಪ್ರತಿ ಕಿಲೋ ಮೀಟರ್‌ಗೆ ನಿಗಧಿಪಡಿಸಿರುವ ದರ ಎಷ್ಟು; | ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 68 ಟಿಡಿಒ 2019, ದಿನಾಂಕ:03.02.2024 ರಲ್ಲಿ ಕರ್ನಾಟಕ ರಾಜ್ಯದಲ್ಲಿ (ಬೆಂಗಳೂರು ನಗರ ವ್ಯಾಪ್ತಿಯನ್ನು ಸಹ ಒಳಗೊಂಡಂತೆ) ಆಚರಣೆ ಮಾಡುವ ಎಲ್ಲಾ ಟ್ಯಾಕ್ಸಿ, ಸಿಟಿ ಟ್ಯಾಕ್ಸಿ ಇನ್ನಿತರೆ ಟ್ಯಾಕ್ಸಿ (ಮೋಟಾರು ಕ್ಯಾಬ್) ಗಳ ಹಾಗೂ ಅಗ್ರಿಗೇಟರ್ಸ್ ನಿಯಮಗಳಡಿ ಕಾರ್ಯಾಚರಿಸುತ್ತಿರುವ ವಿವಿಧ ಮಾದರಿಯ ಟ್ಯಾಕ್ಸಿಗಳ ಪ್ರಯಾಣ ದರ ಮತ್ತು ಸಾಗಾಣಿಕೆ ದರಗಳನ್ನು ನಿಗಧಿ ಪಡಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಆಟೋರಿಕ್ಷಾ ಸೇವೆಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು ನಗರ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮೈಸೂರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಉಡುಪಿ ಇವರುಗಳು ನಿಗಧಿಪಡಿಸಿರುವ ಪ್ರತ್ಯೇಕ ದರಗಳ ಆದೇಶಗಳ ಪ್ರತಿಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 241 ಟಿಡಿಒ 2022, ದಿನಾಂಕ:25.11.2022 ರಲ್ಲಿ ಆಟೋರಿಕ್ಷಾ ಅಗ್ರಿಗೇಟರ್ ಸೇವೆ ಒದಗಿಸಲು ಚಾಲ್ತಿಯಲ್ಲಿರುವ ಲೈಸೆನ್ಸ್ ಹೊಂದಿರುವ ಸಂಸ್ಥೆಗಳಿಗೆ ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಕಾಲಕಾಲಕ್ಕೆ ನಿಗಧಿ ಪಡಿಸಿರುವ ಆಟೋರಿಕ್ಷಾ ಪ್ರಯಾಣ ದರಗಳ ಮೇಲೆ ಶೇಕಡಾ 05 ರಷ್ಟು ಸೇವಾ ಶುಲ್ಕ ಮತ್ತು ಅನ್ವಯಿಸುವ ಜಿ.ಎಸ್.ಟಿ. ತೆರಿಗೆಯನ್ನು ಸೇರಿಸಿ ಅಂತಿಮ ಪ್ರಯಾಣ ದರವನ್ನು ನಿಗಧಿ ಪಡಿಸಲಾಗಿದೆ. ಆದೇಶದ ಪ್ರತಿಯನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |
| ಆ. | ಸರ್ಕಾರದಿಂದ ಕ್ಯಾಬ್ ಮತ್ತು ಆಟೋ ಸೇವೆಗಳಿಗೆ ನಿಗಧಿಪಡಿಸಿರುವ ಕನಿಷ್ಠ ದರ ಮತ್ತು ಗರಿಷ್ಠ ದರ ಎಷ್ಟು; (ಪ್ರತಿ ಕಿಲೋ ಮೀಟರ್) | |

| | ಪ್ರಶ್ನೆ | ಉತ್ತರ |
|---|---|---|
| ಇ. | ಈ ಎಲ್ಲಾ ಕಂಪನಿಗಳಿಗೆ ಪ್ರತಿ ಕಿಲೋ ಮೀಟರ್ ಅಥವಾ ಒಂದು ಪ್ರಯಾಣಕ್ಕೆ ಪಡೆಯುತ್ತಿರುವ ದರ ಎಷ್ಟು: | ಎಲ್ಲಾ ಟ್ಯಾಕ್ಸಿ, ಸಿಟಿ ಟ್ಯಾಕ್ಸಿ ಇನ್ನಿತರೆ ಟ್ಯಾಕ್ಸಿ (ಮೋಟಾರು ಕ್ಯಾಬ್) ಗಳು ಹಾಗೂ ಅಗ್ರಿಗೇಟರ್ಸ್ ನಿಯಮಗಳಡಿ ಕಾರ್ಯಾಚರಿಸುತ್ತಿರುವ ವಿವಿಧ ಮಾದರಿಯ ಟ್ಯಾಕ್ಸಿಗಳು ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 68 ಟಿಡಿಒ 2019, ದಿನಾಂಕ:03.02.2024, ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 241 ಟಿಡಿಒ 2022, ದಿನಾಂಕ:25.11.2022 ಹಾಗೂ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ನಿಗಧಿಪಡಿಸಿರುವ ಪ್ರಯಾಣ ದರಗಳಂತೆ ದರಗಳನ್ನು ಪಡೆಯಬೇಕಾಗಿರುತ್ತದೆ. |
| ಈ) | ಈ ಎಲ್ಲಾ ಕಂಪನಿಯಿಂದ ವಾಹನ ಚಾಲಕರಿಗೆ/ಮಾಲೀಕರಿಗೆ ಒಂದು ಬಾರಿ ಪ್ರಯಾಣಕ್ಕೆ ನಿಗದಿಪಡಿಸಿರುವ ದರ ಎಷ್ಟು: | ಉದ್ಭವಿಸುವುದಿಲ್ಲ. |
| ಉ) | ಬೈಕ್ ಟ್ಯಾಕ್ಸಿ ಮಾಡಲು ಸರ್ಕಾರದಿಂದ ಅನುಮತಿ ಇದೆಯೇ; ಇದ್ದಲ್ಲಿ ಬೈಕ್ ಹಿಂಬದಿ ಸವಾರರಿಗೆ ಅಪಘಾತವಾದಾಗ ವಿಮೆ ಸೌಲಭ್ಯವಿದೆಯೇ; ಬೈಕ್ ಟ್ಯಾಕ್ಸಿ ವೈಟ್ ಬೋರ್ಡ್ ವಾಹನವಾಗಿದ್ದು, ಬಾಡಿಗೆ ನೀಡಲು ಅವಕಾಶವಿದೆಯೇ? | ಬೈಕ್ ಟ್ಯಾಕ್ಸಿ ಸೇವೆ ನೀಡಲು ಸರ್ಕಾರದಿಂದ ಯಾವುದೇ ಅನುಮತಿ ಇರುವುದಿಲ್ಲ. |
| ಊ) | ಸದರಿ ಕಂಪನಿಗಳಿಂದ ರಾಜ್ಯ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು? (ಕಳೆದ ಮೂರು ವರ್ಷದ ಮಾಹಿತಿ ನೀಡುವುದು) | ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಾರಿಇ 67 ಸಾಇಪ 2015, ದಿನಾಂಕ:02.04.2016 ರ ಪ್ರಕಾರ ಕರ್ನಾಟಕ ಆನ್ ಡಿಮ್ಯಾಂಡ್ ಟ್ರಾನ್ಸ್‌ಪೋರ್ಟೇಷನ್ ಟೆಕ್ನಾಲಜಿ ಅಗ್ರಿಗೇಟರ್ಸ್ ನಿಯಮಗಳು 2016 ನ್ನು ಜಾರಿಗೆ ತಂದಿದ್ದು ಕಳೆದ ಮೂರು ವರ್ಷಗಳಲ್ಲಿ 07 ಕಂಪನಿಗಳಿಗೆ ಲೈಸೆನ್ಸ್‌ಗಳನ್ನು ನೀಡಲಾಗಿದ್ದು ಅದರಂತೆ ಲೈಸೆನ್ಸ್ ಶುಲ್ಕ ತಲಾ ರೂ.50,000/-ದಂತೆ ರೂ.3,50,000/- ಗಳ ಆದಾಯ ಸರ್ಕಾರಕ್ಕೆ ಬಂದಿರುತ್ತದೆ. |

**ಟಿಡಿ 49 ಟಿಡಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ - 1

**ಕರ್ನಾಟಕ ಸರ್ಕಾರ**

ಸಂ: ಟಿಡಿ 68 ಟಿಡಿಒ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:03.02.2024.

**ಅಧಿಸೂಚನೆ**

ಮೋಟಾರು ವಾಹನಗಳ ಅಧಿನಿಯಮ, 1988 ರ (ಕೇಂದ್ರ ಅಧಿನಿಯಮ ಸಂಖ್ಯೆ 59/1988) ಕಲಂ 67 ರ ಉಪಕಲಂ (1)(i)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯದಲ್ಲಿ (ಬೆಂಗಳೂರು ನಗರ ವ್ಯಾಪ್ತಿಯನ್ನು ಸಹ ಒಳಗೊಂಡಂತೆ) ಆಚರಣೆ ಮಾಡುವ ಎಲ್ಲಾ ಟ್ಯಾಕ್ಸಿ, ಸಿಟಿ ಟ್ಯಾಕ್ಸಿ ಹಾಗೂ ಇನ್ನಿತರೆ ಟ್ಯಾಕ್ಸಿಗಳಿಗೆ ದರ ಮತ್ತು ಸಾಗಾಣಿಕೆ ದರಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಟಿಡಿ 68 ಟಿಡಿಒ 2019 ದಿನಾಂಕ:01.02.2021 ರಲ್ಲಿ ನಿಗದಿಪಡಿಸಿ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿತ್ತು.

ಮೋಟಾರು ವಾಹನಗಳ ಅಧಿನಿಯಮ, 1988 ರ (ಕೇಂದ್ರ ಅಧಿನಿಯಮ ಸಂಖ್ಯೆ 59/1988) ಕಲಂ 67 ರ ಉಪಕಲಂ (1)(ಎ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ ಟಿಡಿ 68 ಟಿಡಿಒ 2019 ದಿನಾಂಕ:01.04.2021 ರಲ್ಲಿ ಪ್ರಯಾಣ ದರಗಳನ್ನು ನಿರ್ಧರಿಸಲು ವಾಹನಗಳ ಮೌಲ್ಯವನ್ನು ಆಧರಿಸಿ ವಾಹನಗಳನ್ನು 'ಎ', 'ಬಿ', 'ಸಿ' ಮತ್ತು 'ಡಿ' ಗಳೆಂದು ವರ್ಗೀಕರಿಸಿ ಕರ್ನಾಟಕ ರಾಜ್ಯಾದ್ಯಂತ (ಬೆಂಗಳೂರು ನಗರ ವ್ಯಾಪ್ತಿಯನ್ನೂ ಸಹ ಒಳಗೊಂಡಂತೆ) ಅಗ್ರಿಗೇಟರ್ಸ್ ನಿಯಮದಡಿಯಲ್ಲಿ ಕಾರ್ಯಾಚರಿಸುತ್ತಿರುವ ವಿವಿಧ ಮಾದರಿಯ ಟ್ಯಾಕ್ಸಿಗಳಿಗೆ ದರಗಳನ್ನು ನಿಗದಿಪಡಿಸಿ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿತ್ತು.

ಈ ಮೇಲ್ಕಂಡ ಅಧಿಸೂಚನೆಗಳಲ್ಲಿ, ಕನಿಷ್ಟ ಮತ್ತು ಗರಿಷ್ಠ ಪ್ರಯಾಣ ದರಗಳನ್ನು ನಿಗದಿ ಮಾಡಿರುವುದರಿಂದ ಸಿಟಿ ಟ್ಯಾಕ್ಸಿಗಳ ಪ್ರಯಾಣ ದರ ಮತ್ತು ಅಗ್ರಿಗೇಟರ್ಸ್ ನಿಯಮಗಳಡಿ ಕಾರ್ಯಾಚರಿಸುತ್ತಿರುವ ವಿವಿಧ ಮಾದರಿಯ ಟ್ಯಾಕ್ಸಿಗಳ ದರಗಳನ್ನು ಒಂದೇ ಮಾದರಿಯಲ್ಲಿ ನಿಗದಿ ಮಾಡುವ ಬಗ್ಗೆ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ಸಲ್ಲಿಸಿರುವ ದಿನಾಂಕ 26.12.2023ರ ಪ್ರಸ್ತಾವನೆಯಂತೆ, ಸಿಟಿ ಟ್ಯಾಕ್ಸಿಗಳ ಪ್ರಯಾಣ ದರ ಮತ್ತು ಅಗ್ರಿಗೇಟರ್ ನಿಯಮಗಳಡಿ ಕಾರ್ಯಾಚರಿಸುತ್ತಿರುವ ವಿವಿಧ ಮಾದರಿಯ ಟ್ಯಾಕ್ಸಿಗಳ ದರಗಳನ್ನು ಒಂದೇ ಮಾದರಿಯಲ್ಲಿ ನಿಗಧಿಪಡಿಸುವುದು ಅಗತ್ಯವೆಂದು ಕರ್ನಾಟಕ ಸರ್ಕಾರವು ತೀರ್ಮಾನಿಸಿ, ಮೋಟಾರು ವಾಹನಗಳ ಅಧಿನಿಯಮ, 1988 ರ (ಕೇಂದ್ರ ಅಧಿನಿಯಮ ಸಂಖ್ಯೆ 59/1988) ಕಲಂ 67 ರ ಉಪಕಲಂ (1) ಮತ್ತು, ಉಪಕಲಂ (1)(ಎ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರದ ದಿನಾಂಕ:01.02.2021 ಮತ್ತು ದಿನಾಂಕ:01.04.2021 ರ ಅಧಿಸೂಚನೆಗಳನ್ನು ಮಾರ್ಪಡಿಸಿ, ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿದೆ.

**ನಿರ್ದೇಶನಗಳು**

ಕರ್ನಾಟಕ ರಾಜ್ಯದಲ್ಲಿ (ಬೆಂಗಳೂರು ನಗರ ವ್ಯಾಪ್ತಿಯನ್ನು ಸಹ ಒಳಗೊಂಡಂತೆ) ಆಚರಣೆ ಮಾಡುವ ಎಲ್ಲಾ ಟ್ಯಾಕ್ಸಿ, ಸಿಟಿ ಟ್ಯಾಕ್ಸಿ ಇನ್ನಿತರೆ ಟ್ಯಾಕ್ಸಿ(ಮೋಟಾರು ಕ್ಯಾಬ್) ಗಳ ಹಾಗೂ ಅಗ್ರಿಗೇಟರ್ಸ್ ನಿಯಮಗಳಡಿ ಕಾರ್ಯಾಚರಿಸುತ್ತಿರುವ ವಿವಿಧ ಮಾದರಿಯ ಟ್ಯಾಕ್ಸಿಗಳ ಪ್ರಯಾಣ ದರ ಮತ್ತು ಸಾಗಾಣಿಕೆ ದರಗಳನ್ನು ಈ ಕೆಳಕಂಡಂತೆ ಕೂಡಲೇ ಜಾರಿಗೆ ಬರುವಂತೆ ನಿಗಧಿಪಡಿಸಲು ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

--2

| ಕ್ರ. ಸಂ. | ವಾಹನಗಳ ಮಾದರಿ | | ನಿಗದಿತ ದರ (ಕನಿಷ್ಟ 4 ಕಿ.ಮೀ. ವರೆಗೆ | ಪ್ರತಿ ಕಿ.ಮೀ.ಗೆ |
|---|---|---|---|---|
| 1 | ವಾಹನದ ಮೌಲ್ಯ | 10,00,000/- ಕ್ಕಿಂತ ಕಡಿಮೆ | ರೂ.100.00 | ರೂ.24.00 |
| | | 10,00,000/- ರಿಂದ 15,00,000/- ದವರೆಗೆ | ರೂ.115.00 | ರೂ.28.00 |
| | | 15,00,000/- ಕ್ಕಿಂತ ಹೆಚ್ಚು | ರೂ.130.00 | ರೂ.32.00 |

1. ಲಗೇಜ್ ದರಗಳು ಮೊದಲಿನ 120 ಕೆ.ಜಿ. ವರೆಗೆ ಉಚಿತ (ಸೂಟ್ ಕೇಸ್, ಬೆಡ್ಡಿಂಗ್ ಇತ್ಯಾದಿ ವೈಯಕ್ತಿಕ ಲಗೇಜುಗಳು) ನಂತರದ ಪ್ರತಿ 30 ಕಿ.ಗ್ರಾಂ. ಗೆ ಅಥವಾ ಅದರ ಭಾಗಕ್ಕೆ ರೂ.7.00.
2. ಕಾಯುವಿಕೆಯ ದರಗಳು ಮೊದಲ 5 ನಿಮಿಷಗಳವರೆಗೆ ಉಚಿತ, ನಂತರದ ಪ್ರತಿ 1 ನಿಮಿಷಕ್ಕೆ ರೂ.1.00.
3. ರಾತ್ರಿ 12.00 ಗಂಟೆಯಿಂದ ಬೆಳಗಿನ 6.00 ಗಂಟೆಯವರೆಗೆ ಸಂಚರಿಸುವ ಟ್ಯಾಕ್ಸಿಗಳಿಗೆ ಪ್ರಯಾಣ ದರದ ಮೇಲೆ ಶೇ.10 ರಷ್ಟು ಹೆಚ್ಚುವರಿ ದರ.
4. ಸಿಟಿ ಟ್ಯಾಕ್ಸಿಯವರು / ಪ್ರವರ್ತಕರು , ಅಗ್ರಿಗೇಟರ್‌ಗಳು ಅನ್ವಯಿಸುವಂತಹ ಜಿ.ಎಸ್.ಟಿ. ಮತ್ತು ಟೋಲ್ ಶುಲ್ಕವನ್ನು ಪ್ರಯಾಣಿಕರಿಂದ ವಸೂಲಿ ಮಾಡಬಹುದಾಗಿದೆ.
5. ಸಮಯದ ಆಧಾರದಲ್ಲಿ ದರಗಳನ್ನು ವಸೂಲಿ ಮಾಡಬಾರದು. ಸರ್ಕಾರದಿಂದ ಕಿ.ಮೀ. ಆಧಾರದಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ದರಗಳನ್ನು ಮಾತ್ರ ಪ್ರಯಾಣಿಕರಿಂದ ವಸೂಲಿ ಮಾಡುವುದು.
6. ಸರ್ಕಾರದಿಂದ ಕಿ.ಮೀ. ಆಧಾರದಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ದರಗಳನ್ನು ಹೊರತುಪಡಿಸಿ ಅನಧಿಕೃತವಾಗಿ ಯಾವುದೇ ದರಗಳನ್ನು ಪ್ರಯಾಣಿಕರಿಂದ ಪಡೆಯತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Pushpa V.S.

(ಪುಷ್ಪ ವಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) / (ಇ & ಆರ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, ಅಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398 ಹಾಗೂ ಪ್ರಧಾನ ಮಹಾಲೇಖಪಾಲರು (ಎ &ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5359, ಬೆಂಗಳೂರು-560001.
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಟಿ.ಟಿ.ಎಂ.ಸಿ. ಸಂಕೀರ್ಣ, 1ನೇ ಮಹಡಿ, 'ಎ' ಬ್ಲಾಕ್, ಶಾಂತಿನಗರ, ಬೆಂಗಳೂರು-27.
3. ಎಲ್ಲಾ ಅಪರ ಸಾರಿಗೆ ಆಯುಕ್ತರು/ ಜಂಟಿ ಸಾರಿಗೆ ಆಯುಕ್ತರು / ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು:- ಸಾರಿಗೆ ಆಯುಕ್ತರ ಮುಖಾಂತರ.

**ಪ್ರತಿ:**

1. ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಸಾರಿಗೆ ಇಲಾಖೆ, ಬೆಂಗಳೂರು.
3. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು / ಒ.ಡಿ.ಜಿ.ಸಿ.,

ಅನುಬಂಧ - 2

## ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

### : ಅಧಿಸೂಚನೆ :

ಸಂಖ್ಯೆ:ಪ್ರಾಸಾಪ್ರಾ/ಬೆಂ(ನಗರ)/ಆಟೋರಿಕ್ಷಾ ದರ/2021-22 ದಿನಾಂಕ: 06-11-2021

ಬೆಂಗಳೂರು ನಗರ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಆಟೋರಿಕ್ಷಾ ಮೀಟರ್ ದರಪರಿಷ್ಕರಣೆ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಟೋರಿಕ್ಷಾ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಣೆ ಮಾಡಿ ದಿನಾಂಕ: 01-12-2021 ರಿಂದ ಜಾರಿಗೆ ಬರುವಂತೆ ಆದೇಶಿಸಿದೆ.

| | | |
|---|---|---|
| 1) ಕನಿಷ್ಠ ದರ ಮೊದಲ 2.00 ಕಿ.ಮೀ.ಗೆ ದರ | - | ರೂ.30/- (ರೂ.ಮುವತ್ತು ಮಾತ್ರ ಮೂರು ಜನ ಪ್ರಯಾಣಿಕರು |
| 2) ನಂತರದ ಪ್ರತಿ ಕಿಲೋಮೀಟರ್ ದರ | - | ರೂ.15/- (ರೂ.ಹದಿನೈದು ಮಾತ್ರ ಮೂರು ಜನ ಪ್ರಯಾಣಿಕರು |
| 3) ಕಾಯುವಿಕೆ ದರ | | |
| ಅ) ಮೊದಲ ಐದು ನಿಮಿಷ | - | ಉಚಿತ |
| ಆ) ಮೊದಲ ಐದು ನಿಮಿಷದ ನಂತರ ಪ್ರತಿ ಹದಿನೈದು ನಿಮಿಷ ಅಥವಾ ಅದರ ಭಾಗಕ್ಕೆ | - | ರೂ.5/- |
| 4) ಪ್ರಯಾಣಿಕರ ಲಗೇಜು ದರ | | |
| ಅ) ಮೊದಲ 20 ಕೆ.ಜಿ.ಗೆ | - | ಉಚಿತ |
| ಆ) ಮೊದಲ 20ಕೆ.ಜಿ.ಯಿಂದ ನಂತರ ಪ್ರತಿ 20 ಕೆ.ಜಿ.ಗೆ ಅಥವಾ ಅದರ ಭಾಗಕ್ಕೆ | - | ರೂ.5/- |
| ಇ) ಗರಿಷ್ಠ ಪ್ರಯಾಣಿಕರ ಲಗೇಜುಗಳು 50 ಕೆ.ಜಿ.ಗೆ | | |
| 5) ರಾತ್ರಿ ವೇಳೆ ದರ | - | ಸಾಮಾನ್ಯ ದರ+ಸಾಮಾನ್ಯ ದರದ ಅರ್ಧಪಟ್ಟು ಹೆಚ್ಚು (ರಾತ್ರಿ 10-00 ರಿಂದ ಬೆಳಗಿನ ಜಾವ 5-00 ಘಂಟೆವರೆಗೆ) |

1) ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟಿರುವ ನಿಗದಿತ ಪರಿಷ್ಕೃತ ದರದ ಮೂಲ ಪಟ್ಟಿಯನ್ನು ಪ್ರತಿಯೊಂದು ಆಟೋರಿಕ್ಷಾದಲ್ಲಿ ಪ್ರಮುಖ ಸ್ಥಾನದಲ್ಲಿ ಪ್ರದರ್ಶಿಸಬೇಕು.
2) ಪರಿಷ್ಕೃತ ದರಗಳ ಮೀಟರಿನಲ್ಲಿ ಪ್ರದರ್ಶನವಾಗುವಂತೆ ಮೀಟರ್ ಗಳನ್ನು ದಿನಾಂಕ: 28-02-2022 (90 ದಿನಗಳು) ರೊಳಗಾಗಿ ಪುನಃ ಸತ್ಯಾಪನೆ ಮಾಡಿ ಮುದ್ರೆ ಹಾಕಿಸಿಕೊಳ್ಳುವುದು.

ಅಧ್ಯಕ್ಷರು,
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮತ್ತು ಜಿಲ್ಲಾಧಿಕಾರಿಗಳು.
ಬೆಂಗಳೂರು ನಗರ ಜಿಲ್ಲೆ.

**ದಿನಾಂಕ: 08-07-2021 ರಂದು ಬೆಳಿಗ್ಗೆ 11-00 ಗಂಟೆಗೆ ಆಟೋರಿಕ್ಷಾ ದರ ಪರಿಷ್ಕರಣೆ ಸಂಬಂಧ ನಡೆದ ಉಪಸಮಿತಿ ಸಭೆಯ ನಡಾವಳಿ**

**ಉಪಸ್ಥಿತ ಸದಸ್ಯರು**

ಶ್ರೀ/ಶ್ರೀಮತಿ

| | | |
|---|---|---|
| 1. | ಶಾಂತರಾಜು ಕೆ.ಎಂ. ಭಾ.ಪೊ.ಸೇ. | : ಅಧ್ಯಕ್ಷರು ಮತ್ತು ಉಪ ಪೊಲೀಸ್ ಆಯುಕ್ತರು, ಸಂಚಾರ ಪೂರ್ವ ವಿಭಾಗ, ಬೆಂಗಳೂರು. |
| 2. | ಬಿ.ಎಲ್.ಬೀರೇಗೌಡ | : ಪ್ರಾ.ಸಾ.ಅ.ಬೆಂಗಳೂರು (ದಕ್ಷಿಣ) ಮತ್ತು ಸದಸ್ಯರು, ಆಟೋರಿಕ್ಷಾ ದರ ಪರಿಷ್ಕರಣೆ ಉಪ ಸಮಿತಿ. |
| 3. | ವಿ.ಕೆ.ಮೂಸಾ | : ಕಾರ್ಯದರ್ಶಿ, ಆಟೋರಿಕ್ಷಾ ದರ ಪರಿಷ್ಕರಣೆ ಉಪ ಸಮಿತಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಾಂತಿ ನಗರ,ಬೆಂಗಳೂರು |
| 4. | ಮಿಲಿಂದ್ ಕುಮಾರ್ ಎಸ್.ಎಸ್. | : ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ಪಶ್ಚಿಮ) ಮತ್ತು ಸದಸ್ಯರು, ಆಟೋರಿಕ್ಷಾ ದರಪರಿಷ್ಕರಣೆ ಉಪ ಸಮಿತಿ. |
| 5. | ಎಂ.ಎಸ್.ಕುಮಾರ್ | : ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರು ಮತ್ತು ಸದಸ್ಯರು, ಆಟೋರಿಕ್ಷಾ ದರ ಪರಿಷ್ಕರಣೆ ಉಪ ಸಮಿತಿ. |
| 6. | ಸತೀಶ್ ಎಂ.ಹೆಚ್. | : ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಕೇಂದ್ರ ವಿಭಾಗ, ಬೆಂಗಳೂರು. |

ಶ್ರೀ ವಿ.ಕೆ.ಮೂಸಾ, ಕಾರ್ಯದರ್ಶಿ, ಆಟೋರಿಕ್ಷಾ ದರಪರಿಷ್ಕರಣೆ ಉಪ ಸಮಿತಿ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಾಂತಿ ನಗರ, ಬೆಂಗಳೂರು ಇವರು ಉಪಸ್ಥಿತರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು. ದಿನಾಂಕ: 25-03-2021 ರ ಬೆಂಗಳೂರು ನಗರ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ನಿರ್ಣಯದಂತೆ, ಈ ದಿನ ಆಟೋರಿಕ್ಷಾ ದರ ಪರಿಷ್ಕರಣೆ ಸಂಬಂಧ ನಗರದ ಆಟೋ ರಿಕ್ಷಾ ಸಂಘ ಸಂಸ್ಥೆಗಳು, ಆಟೋಚಾಲಕರು ಹಾಗೂ ಸಾರ್ವಜನಿಕರ ಅಭಿಪ್ರಾಯ ಪಡೆಯಲು ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿ ಆಟೋರಿಕ್ಷಾ ದರ ಪರಿಷ್ಕರಣೆ ಸಂಬಂಧ ಪ್ರತಿ ಕಿಲೋಮೀಟರ್ ಆಟೋರಿಕ್ಷಾ ಸಂಚರಿಸಲು ತಗಲುವ ವೆಚ್ಚವನ್ನು ಕಂಡು ಹಿಡಿಯಲು ಅನುಸರಿಸಲಾಗುವ ಮಾನದಂಡಗಳ ಬಗ್ಗೆ ಮಾಹಿತಿ ನೀಡಿದರು. ಈ ಹಿಂದೆ ಆಟೋರಿಕ್ಷಾ ದರ ಪರಿಷ್ಕರಣೆಯಾಗಿರುವ ವಿವರ ಈ ಕೆಳಕಂಡಂತೆ ಇರುತ್ತದೆ.

....2

| ಕ್ರ ಸಂ | ವಿವರ | ದಿ: 22-07-2010 ರಂದು ನಿಗದಿಪಡಿಸಿದ ದರ | ದಿ: 09-03-2012 ರಂದು ನಿಗದಿಪಡಿಸಿದ ದರ | ದಿ: 17-12-2013 ರಂದು ನಿಗದಿಪಡಿಸಿದ ದರ |
|---|---|---|---|---|
| 1 | ಕನಿಷ್ಠ ದರ 2 ಕಿ.ಮೀ.ಗೆ | ರೂ.17=00 | ರೂ.20=00 | ರೂ.25=00 |
| 2 | ದರ ಪ್ರತಿ ಕಿ.ಮೀ. | ರೂ.9=00 | ರೂ.11=00 | ರೂ.13=00 |
| 3 | ಕಾಯುವಿಕೆ ದರ | ಮೊದಲ 5 ನಿಮಿಷ ಉಚಿತ, ನಂತರ ಪ್ರತಿ 15 ನಿಮಿಷ ಅಥವಾ ಅದರ ಭಾಗಕ್ಕೆ ರೂ.1=00 | ಮೊದಲ 5 ನಿಮಿಷ ಉಚಿತ, ನಂತರ ಪ್ರತಿ 15 ನಿಮಿಷ ಅಥವಾ ಅದರ ಭಾಗಕ್ಕೆ ರೂ.1=00 | ಮೊದಲ 5 ನಿಮಿಷ ಉಚಿತ, ನಂತರ ಪ್ರತಿ 15 ನಿಮಿಷ ಅಥವಾ ಅದರ ಭಾಗಕ್ಕೆ ರೂ.5=00 |
| 4 | ಲಗೇಜು ದರ | ಅ) ಮೊದಲ 20 ಕೆ.ಜಿ. ಉಚಿತ<br>ಆ) ನಂತರ ಪ್ರತಿ 20 ಕೆ.ಜಿ. ಅಥವಾ ಅದರ ಭಾಗಕ್ಕೆ ರೂ. 2/- | ಅ) ಮೊದಲ 20 ಕೆ.ಜಿ. ಉಚಿತ<br>ಆ) ನಂತರ ಪ್ರತಿ 20 ಕೆ.ಜಿ. ಅಥವಾ ಅದರ ಭಾಗಕ್ಕೆ ರೂ. 2/- | ಅ) ಮೊದಲ 20 ಕೆ.ಜಿ. ಉಚಿತ<br>ಆ) ನಂತರ ಪ್ರತಿ 20 ಕೆ.ಜಿ. ಅಥವಾ ಅದರ ಭಾಗಕ್ಕೆ ರೂ. 2/-<br>ಇ) ಪ್ರಯಾಣಿಕರ ಗರಿಷ್ಠ ಲಗೇಜು 50ಕೆ.ಜಿ.ಗಳು |
| 5 | ರಾತ್ರಿ ವೇಳೆ ದರ | ರಾತ್ರಿ 10 ರಿಂದ ಬೆಳಗಿನ ಜಾವ 5 ರವರೆಗೆ ಮೀಟರ್ ದರದ ಮೇಲೆ ಅರ್ಧ ಪಟ್ಟು ಹೆಚ್ಚು. | ರಾತ್ರಿ 10 ರಿಂದ ಬೆಳಗಿನ ಜಾವ 5 ರವರೆಗೆ ಮೀಟರ್ ದರದ ಮೇಲೆ ಅರ್ಧ ಪಟ್ಟು ಹೆಚ್ಚು | ರಾತ್ರಿ 10 ರಿಂದ ಬೆಳಗಿನ ಜಾವ 5 ರವರೆಗೆ ಮೀಟರ್ ದರದ ಮೇಲೆ ಅರ್ಧ ಪಟ್ಟು ಹೆಚ್ಚು |

ಮೇಲ್ಕಂಡಂತೆ ದಿನಾಂಕ: 17-12-2013 ರಂದು ಅಂತಿಮವಾಗಿ ಆಟೋರಿಕ್ಷಾ ದರ ಪರಿಷ್ಕರಣೆ ಮಾಡಲಾಗಿರುತ್ತದೆ. ಮೇಲ್ಕಂಡ ದಿನದ ಸಭೆಯಲ್ಲಿ ಮುಂದಿನ ದರಪರಿಷ್ಕರಣೆಯನ್ನು ಎರಡು ವರ್ಷಗಳ ನಂತರ ಅಥವಾ ಆಟೋ ಎಲ್.ಪಿ.ಜಿ. ಇಂಧನ ಬೆಲೆಯು (ಲ್ಯೂಬ್ರಿಕೆಂಟ್ ಆಯಿಲ್ ಸಹಿತ) ರೂ. 70/- (ರೂ.ಎಪ್ಪತ್ತುಗಳು ಮಾತ್ರ) ಯಾವುದು ಮೊದಲು ಆಗ ಕ್ರಮ ವಹಿಸುವುದು ಎಂದು ನಿರ್ಣಯಿಸಲಾಗಿರುತ್ತದೆ. ದರ ಪರಿಷ್ಕರಣೆಯಾಗಿ 8 ವರ್ಷಗಳು ಕಳೆದಿರುವ ಹಿನ್ನೆಲೆಯಲ್ಲಿ ದರ ಪರಿಷ್ಕರಣೆ ಮಾಡಬೇಕಾಗಿದ್ದು, ಈ ಬಗ್ಗೆ ಸಾರ್ವಜನಿಕರು ಆಟೋ ರಿಕ್ಷಾ ಸಂಘ ಸಂಸ್ಥೆಗಳ ಅಭಿಪ್ರಾಯಗಳನ್ನು ನೀಡುವಂತೆ ಕೋರಲಾಯಿತು.

1) ಶ್ರೀ ಜವರೇಗೌಡ, ಅಧ್ಯಕ್ಷರು, ಬೃಹತ್ ಬೆಂಗಳೂರು ಆಟೋ ಮತ್ತು ಟ್ಯಾಕ್ಸಿ ಚಾಲಕರ ಸಂಘ ಇವರು 2018 ರಿಂದ ಈವರೆಗೆ ದರ ಪರಿಷ್ಕರಣೆ ಸಂಬಂಧ ಹಲವಾರು ಬಾರಿ ಮನವಿ ಸಲ್ಲಿಸಲಾಗಿದೆ. 17-12-2013 ರಲ್ಲಿ ಕೊನೆಯಬಾರಿ ದರ ಪರಿಷ್ಕರಣೆ ಮಾಡಲಾಗಿದ್ದು, 9 ವರ್ಷಗಳಿಂದ ದರ ಪರಿಷ್ಕರಣೆಯಾಗಿರುವುದಿಲ್ಲ. ಆಟೋ ದರ ರೂ.1,32,000 ದಿಂದ ರೂ. 2,35,000 ಕ್ಕೆ ಹೆಚ್ಚಳವಾಗಿದೆ. ವಾಹನದ ವಿಮ ರೂ.1000 ದಿಂದ ರೂ. 3000 ದವರೆಗೆ, ಎಫ್.ಸಿ.ಶುಲ್ಕ ರೂ.200 ರಿಂದ 600 ಕ್ಕೆ, ಕಂತು ಕರಾರು ನಮೂದು ಶುಲ್ಕ ರೂ.100 ರಿಂದ 800 ಕ್ಕೆ ಹೆಚ್ಚಳವಾಗಿರುತ್ತದೆ. ವಾಹನ ಚಾಲಕರ ಮಕ್ಕಳ ಶಾಲಾ ಶುಲ್ಕ ಹೆಚ್ಚಳವಾಗಿರುತ್ತದೆ. ನಗರದಲ್ಲಿನ ಮನೆ ಬಾಡಿಗೆ ರೂ.3000 ದಿಂದ ರೂ.8000 ಗಳಿಗೆ ಹೆಚ್ಚಳಗೊಂಡಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಆಟೋರಿಕ್ಷಾ ಮೀಟರ್ ದರವನ್ನು ಕನಿಷ್ಠ ದರವನ್ನು ರೂ.25 ರಿಂದ ರೂ.30 ಕ್ಕೆ ಪ್ರತಿ ಕಿಲೋಮೀಟರ್ ದರ ರೂ.13/- ರಿಂದ ರೂ.15/- ಕ್ಕೆ ಹೆಚ್ಚಿಸಬೇಕೆಂದು ಮನವಿ ಸಲ್ಲಿಸಿದರು.

2) ಶ್ರೀ ಜಯರಾಂ ಎಲ್. ಆಟೋ ಚಾಲಕರು ಮಾತನಾಡಿ 2013 ರಿಂದ ಈವರೆಗೆ ದರ ಪರಿಷ್ಕರಣೆ ಆಗಿರುವುದಿಲ್ಲ. ಆದ್ದರಿಂದ ಕನಿಷ್ಠ ದರವನ್ನು ರೂ. 30 ಗಳಿಗೆ ಹೆಚ್ಚಳ ಮಾಡಬೇಕೆಂದು ಕೋರಿದರು.

3) ಶ್ರೀ. ವೆಂಕಟೇಗೌಡ, ಕೆ.ಎ.ಟಿ.ಡಿ.ಯು, ಇವರು ಮಾತನಾಡಿ ದಿನನಿತ್ಯದ ಎಲ್ಲಾ ವಸ್ತುಗಳ ಬೆಲೆ ಗಗನಕ್ಕೇರಿದೆ. ವಿದ್ಯುತ್‌ಚ್ಛಕ್ತಿ ಬಿಲ್, ಗ್ಯಾಸ್ ಸಿಲಿಂಡರ್ ಬೆಲೆ, ಸಂಚಾರಿ ಶುಲ್ಕಗಳು ಹೆಚ್ಚಳವಾಗಿದೆ. ಆಟೋರಿಕ್ಷಾ ಬೆಲೆ ಹೆಚ್ಚಳವಾಗಿದೆ. ಈ ಎಲ್ಲಾ ವಸ್ತುಗಳ ಬೆಲೆ ಏರಿಕೆ ಬಗ್ಗೆ ಯಾವುದೇ ಸಾರ್ವಜನಿಕ ಅಭಿಪ್ರಾಯ ಪಡೆದಿರುವುದಿಲ್ಲ. ಅದರಂತೆ ಆಟೋರಿಕ್ಷಾ ಮೀಟರ್ ದರವನ್ನು ಸಹ ಹೆಚ್ಚಳ ಮಾಡುವುದರಿಂದ ಚಾಲಕರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿ, ಆಟೋರಿಕ್ಷಾ ಮೀಟರ್ ದರವನ್ನು ಕನಿಷ್ಠ ರೂ. 30 ಗಳಿಗೆ, ಕಿಲೋಮೀಟರ್ ಗೆ ರೂ.15 ರಂತೆ ಏರಿಕೆ ಮಾಡುವಂತೆ ಕೋರಿದರು.

4) ಶ್ರೀ ಜಯರಾಂ, ಆಟೋಚಾಲಕ ಇವರು ಮಾತನಾಡಿ ಆಟೋರಿಕ್ಷಾ ಆಯಿಲ್ ದರ, ತರಕಾರಿ ಬೆಲೆಗಳು ರೂ. 20 ರಿಂದ ರೂ.80 ಕ್ಕೆ ಹೆಚ್ಚಳವಾಗಿದೆ. ಎಲ್ಲಾ ವಸ್ತುಗಳ ಬೆಲೆ ಏರಿಕೆಯ ಕಾರಣದಿಂದ ಆಟೋರಿಕ್ಷಾ ಮೀಟರ್ ದರವನ್ನು ಕನಿಷ್ಠ ರೂ. 30 ಗಳಿಗೆ, ಕಿಲೋಮೀಟರ್ ಗೆ ರೂ.15 ರಂತೆ ಏರಿಕೆ ಮಾಡುವಂತೆ ಕೋರಿದರು.

5) ಶ್ರೀ ಚಂದ್ರಶೇಖರ್, ಕೆ.ಆರ್.ಜಿ.ಎ.ಸಿ.ಯು.ಇವರು ಮಾತನಾಡಿ ಮಂಗಳೂರು ನಗರದಲ್ಲಿ ಈಗಾಗಲೇ ಕನಿಷ್ಠ ದರ ರೂ.30/- ಹಾಗೂ ಕಿಲೋಮೀಟರಿಗೆ ರೂ.15/- ನಿಗದಿಪಡಿಸಲಾಗಿದೆ. ಪ್ರಸ್ತುತ ಬೆಲೆ ಏರಿಕೆಯನ್ನು ಗಮನದಲ್ಲಿರಿಸಿ ಕಾಲಕಾಲಕ್ಕೆ ಮೀಟರ್ ದರವನ್ನು ಪರಿಷ್ಕರಿಸಲು ಅಗತ್ಯವಾಗಿದೆ ಎಂದು ಕೋರಿದರು. ದರ ಪರಿಷ್ಕರಣೆ ಮಾಡಿದ ನಂತರ ಆಟೋಚಾಲಕರು ಅದನ್ನು ತಮ್ಮ ಮೀಟರ್ ನಲ್ಲಿ ಅಳವಡಿಸಿಕೊಳ್ಳಲು ಸೆಪ್ಟಂಬರ್-2021 ಅಥವಾ ಅಕ್ಟೋಬರ್ ರವರೆಗೆ ಕಾಲಾವಕಾಶ ನೀಡಬೇಕು. ಆಟೋರಿಕ್ಷಾ ರಹದಾರಿಗಳಲ್ಲಿ 100ಕೆ.ಜಿ. ವರೆಗೆ ಪ್ರಯಾಣಿಕರ ಲಗೇಜಗಳನ್ನು ತೆಗೆದುಕೊಂಡು ಹೋಗಲು ರಹದಾರಿಗಳಲ್ಲಿ ಅವಕಾಶ ನೀಡಬೇಕು. ಇದರಿಂದ ವಾಹನ ಚಾಲಕರು ಪೊಲೀಸ್‌ರ ತೊಂದರೆ ಇಲ್ಲದಂತೆ ಮುಕ್ತವಾಗಿ ಸಂಚರಿಸಲು ಅವಕಾಶವಾಗುತ್ತದೆ ಎಂದು ತಿಳಿಸಿದರು.

6) ಶ್ರೀ ಮಂಜುನಾಥ್, ಆದರ್ಶ ಆಟೋ ಚಾಲಕರ ಸಂಘ ಇವರು ಮಾತನಾಡಿ ಆಟೋಚಾಲಕರು ಪ್ರಸ್ತುತ ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿರುತ್ತಾರೆ. ದಿನದಲ್ಲಿ 15 ರಿಂದ 16 ಗಂಟೆಗಳ ಆಟೋ ಚಾಲನೆ ಮಾಡುತ್ತಿರುವುದರಿಂದ ಹಲವಾರು ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ. ಇವರ ವೈದ್ಯಕೀಯ ವೆಚ್ಚ ಹೆಚ್ಚಾಗುತ್ತಿದ್ದು, ಅವರ ಜೀವನ ನಿರ್ವಹಣೆಗಾಗಿ ಪ್ರತಿ ದಿನ ಕನಿಷ್ಠ ರೂ.1,500/- ಗಳನ್ನು ದುಡಿಯುವುದು ಅನಿವಾರ್ಯವಾಗಿದೆ. ಬೆಂಗಳೂರು ನಗರದಲ್ಲಿ ಮನೆ ಬಾಡಿಗೆ ಹೆಚ್ಚಾಗಿರುವ ಕಾರಣ ಕೆಲವು ವಾಹನ ಚಾಲಕರು ದೂರದ ಮಾಗಡಿ ಮುಂತಾದ ಪ್ರದೇಶಗಳಲ್ಲಿ ವಾಸವಾಗಿ ಪ್ರತಿ ದಿನ ಬಸ್ಸಿನಲ್ಲಿ ಪ್ರಯಾಣಿಸಿ ನಗರದಲ್ಲಿ ಆಟೋ ಚಾಲನೆ ಮಾಡಿ ಮತ್ತೆ ತಮ್ಮ ಮನೆಗಳಿಗೆ ಹೋಗುತ್ತಿದ್ದಾರೆ. ಆದ್ದರಿಂದ ಆಟೋರಿಕ್ಷಾ ಮೀಟರ್ ದರವನ್ನು ಕನಿಷ್ಠ ರೂ. 30 ಗಳಿಗೆ, ಕಿಲೋಮೀಟರ್‌ಗೆ ರೂ.16 ರಂತೆ ಏರಿಕೆ ಮಾಡುವಂತೆ ಕೋರಿದರು.

7) ಶ್ರೀ ತನ್ವೀರ್ ಪಾಷಾ, ಕರ್ನಾಟಕ ಸ್ಟೇಟ್ ಆರ್.ಟಿ.ಓ.ಟ್ಯಾಕ್ಸಿ ಫೇಡರೇಷನ್ ಇವರು ಮಾತನಾಡಿ ದರ ಪರಿಷ್ಕರಣೆಯ ಬಗ್ಗೆ ಎಲ್ಲರ ಅಭಿಪ್ರಾಯಗಳನ್ನು ಸಂಗ್ರಹ ಮಾಡುತ್ತಿರುವುದು ಸ್ವಾಗತರ್ಹವಾಗಿದೆ. ಕಳೆದ7 ವರ್ಷಗಳಿಂದ ದರ ಪರಿಷ್ಕರಣೆಯಾಗಿರುವುದಿಲ್ಲ. ಬಿ.ಎಂ.ಟಿ.ಸಿ ಮತ್ತು ಕೆ.ಎಸ್.ಆರ್.ಟಿ.ಸಿ.ಯ ಬಸ್ಸುಗಳ ಪ್ರಯಾಣ ದರವನ್ನು ಸಹ ಹೆಚ್ಚಿಸುವ ಸಂದರ್ಭದಲ್ಲಿ ಯಾವುದೇ ಸಾರ್ವಜನಿಕ ಅಭಿಪ್ರಾಯ ಪಡೆಯುವುದಿಲ್ಲ. ಬೆಲೆ ಏರಿಕೆ ಪರಿಣಾಮವಾಗಿ ದಿನನಿತ್ಯದ ವಸ್ತುಗಳ ಬೆಲೆ

....4

ಹೆಚ್ಚಳವಾಗಿದೆ. ಚಾಲಕರ ಹಿತದೃಷ್ಟಿಯಿಂದ ಮೀಟರ್ ದರವನ್ನು ಹೆಚ್ಚು ಮಾಡದಿದ್ದಲ್ಲಿ ಆಟೋ ಚಾಲಕರ ವರ್ಗ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ. ಆಟೋ ಮೀಟರ್ ಏರಿಕೆಯಿಂದ ಪ್ರಯಾಣಿಕರು ಬರುವುದಿಲ್ಲ ಎಂಬುದು ತಪ್ಪು ಅಭಿಪ್ರಾಯವಾಗಿದೆ. ಚಾಲಕರ ಹಿತದೃಷ್ಟಿಯಿಂದ ಆಟೋರಿಕ್ಷಾ ಮೀಟರ್ ದರವನ್ನು ಕನಿಷ್ಠ ರೂ. 30 ಗಳಿಗೆ, ಕಿಲೋಮೀಟರ್‌ಗೆ ರೂ.16 ರಂತೆ ಏರಿಕೆ ಮಾಡುವಂತೆ ಕೋರಿದರು.

8) ಮಾಯಾರಘು, ಕರ್ನಾಟಕ ಜನಾಶ್ರಯ ಆಟೋ ಟ್ಯಾಕ್ಸಿ ಚಾಲಕರ ಸಂಘ, ಇವರು ಮಾತನಾಡಿ ಸಭೆಯಲ್ಲಿ ಈಗಾಗಲೇ ತಿಳಿಸಿರುವ ವಿಷಯಗಳಂತೆ ಆಟೋರಿಕ್ಷಾ ಮೀಟರ್ ದರವನ್ನು ಕನಿಷ್ಠ ರೂ. 30 ಗಳಿಗೆ, ಕಿಲೋಮೀಟರ್‌ಗೆ ರೂ.16 ರಂತೆ ಏರಿಕೆ ಮಾಡುವಂತ ಕೋರಿದರು.

9) ಶ್ರೀನಿವಾಸ ಸಿ.ಎನ್. ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ (ರಿ). ಸಿ.ಐ.ಟಿ.ಯು. ಇವರು ಮಾತನಾಡಿ ಆಟೋಚಾಲಕರು ಅಸಂಘಟಿತ ಕಾರ್ಮಿಕರಾಗಿರುತ್ತಾರೆ. ಲಾಕ್ ಡೌನ್ ಕಾರಣದಿಂದಾಗಿ ಹಲವಾರು ಜನ ವಾಹನ ಚಾಲಕರು ತಮ್ಮ ವೃತ್ತಿ ತೊರೆದು ಊರುಗಳಿಗೆ ತೆರಳಿರುತ್ತಾರೆ. ಪೆಟ್ರೋಲ್ ಬೆಲೆ, ಡಿಸೆಲ್ ಬೆಲೆ ಹೆಚ್ಚಳವಾಗಿದೆ. ಆರ್.ಟಿ.ಓ ಶುಲ್ಕ, ದಂಡದ ಪ್ರಮಾಣಗಳು ಮೂರು ಪಟ್ಟು ಹೆಚ್ಚಾಗಿದೆ. ಮನೆ ಬಾಡಿಗೆ, ಆಹಾರ ಧಾನ್ಯಗಳ ಬೆಲೆ ಹೆಚ್ಚಳವಾಗಿರುತ್ತವೆ. ಆದ್ದರಿಂದ ಕನಿಷ್ಠ ಮೀಟರ್ ದರ ರೂ.36/-, ಕಿಲೋಮೀಟರ್‌ಗೆ ರೂ.18 ರಂತೆ ಏರಿಕೆ ಮಾಡುವಂತೆ ಕೋರಿದರು.

10) ಶ್ರೀ ಸೋಮಶೇಖರ್, ನಮ್ಮ ಚಾಲಕರ ಟ್ರೇಡ್ ಯೂನಿಯನ್ ಇವರು ಮಾತನಾಡಿ ರಾಜ್ಯದಲ್ಲಿ ಕೋವಿಡ್-19 3ನೇ ಅಲೆ ಉಂಟಾಗುವ ಸಂಭವವಿದೆ, ಇದರಿಂದಾಗಿ ಲಾಕ್ ಡೌನ್ ಜಾರಿಯಾಗುವ ಸಾಧ್ಯತೆ ಇದೆ. ಈ ಕಾರಣದಿಂದಾಗಿ ಸರ್ಕಾರವು ಬಿ.ಎಂ.ಟಿ.ಸಿ., ಮೆಟ್ರೋ ದರ ಏರಿಕೆಯನ್ನು ತಡೆಹಿಡಿದಿರುತ್ತದೆ. ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯುವ ಸಂಸ್ಥೆಗಳ ಮೇಲೆ ಕಡಿವಾಣ ಹಾಕಬೇಕಾಗಿರುತ್ತದೆ. ದರ ಹೆಚ್ಚಳದಿಂದಾಗಿ ಮಧ್ಯಮ ವರ್ಗದವರ ಮೇಲೆ ಹೆಚ್ಚಿನ ಹೊರೆ ಉಂಟಾಗುತ್ತಿದೆ. ಈಗ ಇರುವ ಪ್ರಸ್ತುತ ದರವನ್ನು ಮುಂದುವರೆಸಿ, ಕೋವಿಡ್ ಮುಗಿದ ನಂತರ ದರ ಹೆಚ್ಚಳವನ್ನು ಮಾಡುವುದು ಸೂಕ್ತವಾಗಿದೆ. ಇದರಿಂದಾಗಿ ಆಟೋಚಾಲಕರು ಬಡ ಮಧ್ಯಮ ವರ್ಗದ ಜೊತೆಗೆ ಇರುವುದಾಗಿ ತಿಳಿದು ಬರುತ್ತದೆ ಎಂದು ದರ ಏರಿಕೆಯನ್ನು ಮುಂದೂಡುವಂತೆ ವಿನಂತಿಸಿದರು.

11) ರಘುನಾರಾಯಣ ಗೌಡ, ಪೀಸ್ ಆಟೋ ಚಾಲಕರ ಸಂಘಟನೆ, ಆಟೋರಿಕ್ಷಾ ದರ ಪರಿಷ್ಕರಣೆಯು 2013 ರಲ್ಲಿ ನಡೆಸಲಾಗಿದ್ದು, ಈವರೆವಿಗೂ ಯಾವುದೇ ಹೆಚ್ಚಳ ಉಂಟಾಗಿರುವುದಿಲ್ಲ. 2013 ರಲ್ಲಿನ 20,000 ಟ್ಯಾಕ್ಸಿಗಳು ಇಂದು 1,50,000 ಕ್ಕೆ ಏರಿಕೆಯಾಗಿದೆ. ಆಟೋರಿಕ್ಷಾ ಪ್ರಯಾಣ ದರದಲ್ಲಿಯೇ ಟ್ಯಾಕ್ಸಿಗಳು ಸಹ ಸೇವೆ ನೀಡುತ್ತಿರುವ ಹಿನ್ನೆಲೆಯಲ್ಲಿ ದರ ಏರಿಕೆಯಿಂದ ಆಟೋ ಚಾಲಕರಿಗೆ ಮತ್ತಷ್ಟು ತೊಂದರೆಯಾಗುತ್ತದೆ. ಪ್ರತಿ ಆಟೋ ಚಾಲಕರ ಚಾಲನಾ ಅನುಜ್ಞಾಪತ್ರದ ಮೇಲೆ ಸರ್ವೇ ಮಾಡಿ, ಅವರ ಅಭಿಪ್ರಾಯವನ್ನು ಪಡೆದು ದರ ಪರಿಷ್ಕರಣೆ ಮಾಡಬಹುದು. ಕೋವಿಡ್ ಸಂದರ್ಭದಲ್ಲಿ ಅಆಟೋಚಾಲಕರು ಸಾರ್ವಜನಿಕರ ಜೊತೆ ನಿಲ್ಲಬೇಕಾಗಿರುವುದರಿಂದ ದರ ಏರಿಕೆ ಪ್ರಸ್ತಾವನೆಯನ್ನು ಮುಂದೂಡಬೇಕೆಂದು ಕೋರಿದರು.

12) ಉಪಪೊಲೀಸ್ ಆಯುಕ್ತರು, ಸಂಚಾರ ಪೂರ್ವ ವಿಭಾಗ ಇವರು ಮಾತನಾಡಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ನಿರ್ಣಯದಂತೆ ಎಲ್ಲರ ಅಭಿಪ್ರಾಯ ಸಂಗ್ರಹಿಸುವ ಸಲುವಾಗಿ ಈ ಸಭೆಯನ್ನು ಕರೆಯಲಾಗಿದೆ. ಸಭೆಯಲ್ಲಿ ಹಾಜರಿರುವವರು ಮಾತನಾಡುವಾಗ ಶಾಂತಿಯುತವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಸೂಚಿಸಿದರು.

13) ಗಜೇಂದ್ರ ಪ್ರಸಾದ್, ಸಾರ್ವಜನಿಕರು, ಸುಧಾಮ ನಗರ, ಇವರು ಮಾತನಾಡಿ ಕರೋನ ಬಂದಾಗಿನಿಂದ, ದಿನನಿತ್ಯದ ಸಾಮಾಗ್ರಿಗಳ ಬೆಲೆ ಹೆಚ್ಚಳದಿಂದ ಸಾರ್ವಜನಿಕರ ಖರ್ಚು ವೆಚ್ಚಗಳು ಹೆಚ್ಚಾಗಿದ್ದು, ಅವರು ಪ್ರತಿನಿತ್ಯ ಜೀವನ ನಡೆಸುವುದು ಕಷ್ಟಕರವಾದ ಪರಿಸ್ಥಿತಿ ಇದೆ. ಈ ಹಿಂದ ನೀಡುತ್ತಿದ್ದ ವೇತನ ರೂ.30,000/- ದಿಂದ ರೂ.18,000 ಗಳಿಗೆ ಇಳಿಕೆಯಾಗಿರುತ್ತದೆ. ಆಟೋಚಾಲಕರಿಗೆ ಸರ್ಕಾರದಿಂದ ಇತರೆ ಸೌಲಭ್ಯಗಳನ್ನು ನೀಡಿ ಅವರಿಗೆ ಅನುಕೂಲ ಮಾಡಿಕೊಟ್ಟು ಪ್ರಸ್ತುತ ಸಂದರ್ಭದಲ್ಲಿ ಮೀಟರ್ ದರ ಏರಿಕೆಯನ್ನು ಕೈಬಿಡುವಂತೆ ಮನವಿ ಮಾಡಿದರು.

14) ಅಯಾಜ್, ಪೀಸ್ ಆಟೋ ಚಾಲಕ ಇವರು ಮಾತನಾಡಿ ಮೀಟರ್ ದರವನ್ನು ಹೆಚ್ಚಳ ಮಾಡುವುದರಿಂದ ಆಟೋ ಚಾಲಕರಿಗೆ ಯಾವುದೇ ಅನುಕೂಲ ಆಗುವುದಿಲ್ಲ. ಪ್ರಯಾಣಿಕರು ಆಟೋಗಳಲ್ಲಿ ಸಂಚರಿಸುವಂತೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು. ಮೀಟರ್ ದರ ಪ್ರಸ್ತುತ ಇರುವ ಹಾಗೆಯೇ ಮುಂದುವರೆಯಬೇಕೆಂದು ಮನವಿ ಮಾಡಿದರು.

15) ಅಣ್ಣೇಗೌಡ, ಆಟೋ ಚಾಲಕ ಇವರು ಮಾತನಾಡಿ ಆಟೋ ಚಾಲಕರಿಗೆ ಸರ್ಕಾರದಿಂದ ಲಭ್ಯವಾಗುವ ಸೌಲಭ್ಯವನ್ನು ಹೆಚ್ಚಳ ಮಾಡಿ ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆಗಳನ್ನು ಹಾಗೂ ದಿನನಿತ್ಯದ ವಸ್ತುಗಳ ಬೆಲೆ ಏರಿಕೆಯನ್ನು ಕಡಿಮೆಗೊಳಿಸಿದರೆ, ಪ್ರಸ್ತುತ ಇರುವ ದರದಲ್ಲಿಯೇ ನಾವು ಆಟೋ ಚಾಲನೆ ಮಾಡುತ್ತೇವೆ ಎಂದು ತಿಳಿಸಿದರು.

ಈ ಉಪ ಸಮಿತಿಯು ಮೇಲ್ಕಂಡ ಆಟೋರಿಕ್ಷಾ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಆಟೋಚಾಲಕರು ಹಾಗೂ ಸಾರ್ವಜನಿಕರ ಅಭಿಪ್ರಾಯಗಳನ್ನು ಆಲಿಸಲಾಯಿತು. ಬಹುತೇಕ ಆಟೋರಿಕ್ಷಾ ಸಂಘಟನೆಗಳ ಪ್ರತಿನಿಧಿಗಳು, ಆಟೋಚಾಲಕರು ಆಟೋರಿಕ್ಷಾ ದರ ಪರಿಷ್ಕರಣೆಯನ್ನು ಮಾಡಬೇಕೆಂದು ಕೋರಿರುತ್ತಾರೆ. ಕೆಲವು ಕೆಲ ಸಾರ್ವಜನಿಕರು ಆಟೋರಿಕ್ಷಾ ದರ ಪರಿಷ್ಕರಣೆಯನ್ನು ವಿರೋಧಿಸಿರುತ್ತಾರೆ. ಆಟೋರಿಕ್ಷಾ ಸಂಘಟನೆಗಳ ಮನವಿ, ಅಭಿಪ್ರಾಯ ಇವುಗಳನ್ನು ಸಮಿತಿಯು ವಿವರವಾಗಿ ಚರ್ಚಿಸಿ ಆಟೋರಿಕ್ಷಾ ಪ್ರತಿ ಕಿಲೋಮೀಟರಿಗೆ ತಗಲುವ ವೆಚ್ಚವನ್ನು ಈ ಕೆಳಕಂಡ ಅಂಶಗಳ ಹಿನ್ನೆಲೆಯಲ್ಲಿ ಗಣನೆಗೆ ತೆಗೆದುಕೊಳ್ಳಲು ನಿರ್ಣಯಿಸಲಾಯಿತು.

| ಕ್ರ.ಸಂ. | ವಿವರ | ಹಳೆ ದರ ರೂ.ಗಳಲ್ಲಿ (17-12-2013 ರಲ್ಲಿದ್ದಂತೆ) | ಹೊಸ ದರ (ರೂ.ಗಳಲ್ಲಿ) | ಹೆಚ್ಚಳವಾಗಿರುವ ಪ್ರಮಾಣ (ರೂ.ಗಳಲ್ಲಿ) |
|---|---|---|---|---|
| 1. | ಹೊಸ ವಾಹನದ ಮುಖಬೆಲೆ | 1,25,000=00 | 2,20,000=00 | 95000=00 |
| 2. | ಆಟೋರಿಕ್ಷಾ ನೋಂದಣಿ ಶುಲ್ಕ | 300=00 | 1000=00 | 700=00 |
| 3. | ಅರ್ಹತಾಪತ್ರ ನವೀಕರಣ | 200=00 | 600=00 | 400=00 |
| 4. | ವಾಹನದ ವಿಮೆ | 4000=00 | 9000=00 | 5000=00 |
| 5. | ಕಂತು ಕರಾರು ನಮೂದು ಶುಲ್ಕ | 100=00 | 800=00 | 700=00 |
| 6. | ಎಲ್ ಪಿ ಜಿ ಗ್ಯಾಸ್ ಬೆಲೆ | 70=00 | 84=00 | 14=00 |

ಮೇಲ್ಕಂಡ ಬೆಲೆ ಏರಿಕೆ ಅಂಶಗಳ ಜೊತೆಗೆ ಈ ಕೆಳಕಂಡ ಅಂಶಗಳನ್ನು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿರುತ್ತದೆ.

1) ದರ ಪರಿಷ್ಕರಿಸದೆ ಇದ್ದಲ್ಲಿ ಆಟೋ ಮೀಟರ್‌ಗಳನ್ನು ವಿರೂಪಗೊಳಿಸುವ ಪ್ರಕರಣಗಳು ಹೆಚ್ಚಾಗುತ್ತವೆ. ದರ ಪರಿಷ್ಕರಿಸಿದ್ದಲ್ಲಿ ಮೀಟರ್ ವಿರೂಪಗೊಳಿಸುವ ಪ್ರಕರಣಗಳು ಕಡಿಮೆಯಾಗುತ್ತದೆ.
2) ದರ ಪರಿಷ್ಕರಿಸಿದ್ದಲ್ಲಿ ಪ್ರಾಧಿಕಾರವು ಮೀಟರ್ ವಿರೂಪಗೊಳಿಸುವ ಚಾಲಕರ ಮತ್ತು ಆಟೋ ಮಾಲೀಕರ ಮೇಲೆ ಸೂಕ್ತ ಕ್ರಮ ಜರುಗಿಸಿ, ವಾಹನ ಹೊಂದಿರುವ ರಹದಾರಿಯನ್ನು ಅಮಾನತ್ತು ಕ್ರಮ ಕೈಗೊಳ್ಳಬಹುದಾಗಿರುತ್ತದೆ.

...6

3) ಮಂಗಳೂರು ಮತ್ತು ಉಡುಪಿ ನಗರಗಳಲ್ಲಿ ಈಗಾಗಲೇ ಕನಿಷ್ಠ ದರ ರೂ. 30/-(1.5 ಕಿ.ಮೀ) ಮತ್ತು ಪ್ರತಿ ಕಿಲೋ ಮೀಟರ್‌ಗೆ ರೂ. 17/- ನಿಗಧಿಪಡಿಸಲಾಗಿರುತ್ತದೆ.

4) ಅಗ್ರಿಗೇಟರ್ಸ್ ಅಡಿಯಲ್ಲಿ ಓಡುವ ಆಟೋ ರಿಕ್ಷಾಗಳು ಅಗ್ರಿಗೇಟರ್ಸ್‌ಗಳಿಗೆ ಶೇ. 20 ರಷ್ಟು ಕಮೀಷನ್ ನೀಡಬೇಕಾಗಿರುತ್ತದೆ.

ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಉಪ ಸಮಿತಿಯು ಆಟೋರಿಕ್ಷಾ ದರ ಪರಿಷ್ಕರಣೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಬಹುದೆಂದು ಅಭಿಪ್ರಾಯ ನೀಡಲಾಗಿರುತ್ತದೆ.

| | | ಪ್ರಸ್ತಾವಿತ ದರ (ರೂ.ಗಳಲ್ಲಿ) | ಹಾಲಿ ದರ (ರೂ.ಗಳಲ್ಲಿ) | ಹೆಚ್ಚಳ ದರ (ರೂ.ಗಳಲ್ಲಿ) |
|---|---|---|---|---|
| 1 | ಕನಿಷ್ಠ ದರ ಮೊದಲ 2.00 ಕಿ.ಮೀ.ಗೆ ದರ | 30-00 | 25-00 | 05-00 |
| 2 | ನಂತರದ ಪ್ರತಿ ಕಿಲೋಮೀಟರ್ ದರ | 15-00 | 13-00 | 02-00 |
| 3 | ಕಾಯುವಿಕೆ ದರ | | | |
| | ಅ) ಮೊದಲ ಐದು ನಿಮಿಷ | ಉಚಿತ | ಉಚಿತ | ಉಚಿತ |
| | ಆ) ಮೊದಲ ಐದು ನಿಮಿಷದ ನಂತರ ಪ್ರತಿ ಹದಿನೈದು ನಿಮಿಷ ಅಥವಾ ಅದರ ಭಾಗಕ್ಕೆ | 05-00 | 05-00 | 00-00 |
| 4 | ಪ್ರಯಾಣಿಕರ ಲಗೇಜು ದರ | | | |
| | ಅ) ಮೊದಲ 20 ಕೆ.ಜಿ.ಗೆ | ಉಚಿತ | ಉಚಿತ | ಉಚಿತ |
| | ಆ) ಮೊದಲ 20 ಕೆ.ಜಿ. ಯಿಂದ ನಂತರ ಪ್ರತಿ 20 ಕೆ.ಜಿ. ಗೆ ಅಥವಾ ಅದರ ಭಾಗಕ್ಕೆ | 05-00 | 02-00 | 03-00 |
| 5 | ರಾತ್ರಿ ವೇಳೆ ದರ | ಸಾಮಾನ್ಯ ದರ + ಸಾಮಾನ್ಯ ದರದ ಅರ್ಧದಷ್ಟು ಹೆಚ್ಚಳ (ರಾತ್ರಿ 10-00 ರಿಂದ ಬೆಳಗಿನ ಜಾವ 05-00 ಗಂಟೆಯವರೆಗೆ) | | |

ಮೇಲ್ಕಂಡಂತೆ ದರ ಪರಿಷ್ಕರಣೆಯನ್ನು ಮಾಡಿ ಆಟೋರಿಕ್ಷಾ ಮೀಟರಿನಲ್ಲಿ ಹೊಸ ದರಪಟ್ಟಿ ಅಳವಡಿಸಿಕೊಳ್ಳಲು ಮೂರು ತಿಂಗಳ ಕಾಲಾವಕಾಶ ನೀಡಬಹುದಾಗಿದೆ ಎಂದು ಸಮಿತಿಯು ಅಭಿಪ್ರಾಯ ವ್ಯಕ್ತಪಡಿಸಿತು.

31/8/21

(ಶಾಂತರಾಜು ಕೆ.ಎಂ. ಭಾ.ಪೊ.ಸೇ.)
ಅಧ್ಯಕ್ಷರು ಮತ್ತು
ಉಪ ಪೊಲೀಸ್ ಆಯುಕ್ತರು
(ಸಂಚಾರ ಪೂರ್ವ ವಿಭಾಗ).

(ಸಿ.ಎಲ್. ಬೀರೇಗೌಡ)
ಸದಸ್ಯರು,
ಪ್ರಾದೇಶಿಕ ಸಾರಿಗೆ ಅಧಿಕಾರಿ,
ಜಯನಗರ, ಬೆಂಗಳೂರು(ದಕ್ಷಿಣ).

(ಮಿಲಿಂದ್ ಕುಮಾರ್ ಎಸ್.ಎಸ್.)
ಸದಸ್ಯರು
ಪ್ರಾದೇಶಿಕ ಸಾರಿಗೆ ಅಧಿಕಾರಿ,
ಬೆಂಗಳೂರು (ಪಶ್ಚಿಮ).

(ಎಂ.ಎಸ್. ಕುಮಾರ್)
ಸದಸ್ಯರು
ಕಾನೂನು ಮಾಪನ ಶಾಸ್ತ್ರ
ಸಹಾಯಕ ನಿಯಂತ್ರಕರು.

(ಬಿ.ಕೆ. ಮೂಸಾ)
ಕಾರ್ಯದರ್ಶಿ,
ಪ್ರಾದೇಶಿಕ ಸಾರಿಗೆ ಅಧಿಕಾರಿ,
ಶಾಂತಿ ನಗರ, ಬೆಂಗಳೂರು.

## ದಿನಾಂಕ: 23-09-2021 ರಂದು ಬೆಳಿಗ್ಗೆ 11.00 ಘಂಟೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಬೆಂಗಳೂರು ನಗರ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ನಡಾವಳಿ

<u>ಉಪಸ್ಥಿತರು:</u>

1) ಜೆ.ಮಂಜುನಾಥ್, ಭಾ.ಆ.ಸೇ.
ಅಧ್ಯಕ್ಷರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
ಮತ್ತು ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ.

2) ಕೆ.ಎಂ.ಶಾಂತರಾಜು, ಭಾ.ಪೊ.ಸೇ.
ಸದಸ್ಯರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
ಮತ್ತು ಉಪ ಪೊಲೀಸ್ ಆಯುಕ್ತರು,
ಸಂಚಾರ ಪೂರ್ವ ವಿಭಾಗ,
ಬೆಂಗಳೂರು ನಗರ ಜಿಲ್ಲೆ.

<u>ಕ್ರಮ ಸಂಖ್ಯೆ 4. ವಿಷಯ ಸಂಖ್ಯೆ 48/2019-20</u>

ಆಟೋರಿಕ್ಷಾ ಮೀಟರ್ ದರವನ್ನು ಹೆಚ್ಚಿಸುವಂತೆ ರಚಿಸಲಾಗಿದ್ದ ಉಪ ಸಮಿತಿಯು ಸಲ್ಲಿಸಿರುವ ವರದಿಯನ್ವಯ ದರ ಪರಿಷ್ಕರಣೆ ಕುರಿತು ನಿರ್ಣಯ ಕೈಗೊಳ್ಳುವ ಬಗ್ಗೆ.

ಟಿಪ್ಪಣಿ:- ದಿನಾಂಕ: 25-03-2021 ರ ಬೆಂಗಳೂರು ನಗರ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯಲ್ಲಿ ಆಟೋರಿಕ್ಷಾ ದರ ಪರಿಷ್ಕರಣೆ ಸಂಬಂಧ ನಗರದ ಆಟೋ ರಿಕ್ಷಾ ಸಂಘ ಸಂಸ್ಥೆಗಳು, ಆಟೋಚಾಲಕರು ಹಾಗೂ ಸಾರ್ವಜನಿಕರ ಅಭಿಪ್ರಾಯ ಪಡೆದು ವರದಿ ಸಲ್ಲಿಸುವಂತೆ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಉಪ ಸಮಿತಿಯು ದಿನಾಂಕ: 08-07-2021 ರಂದು ಸಭೆ ನಡೆಸಿ ದರ ಪರಿಷ್ಕರಣೆ ಸಂಬಂಧ ಈ ಕೆಳಕಂಡಂತೆ ಶಿಫಾರಸ್ಸು ನೀಡಲಾಗಿರುತ್ತದೆ. ಉಪ ಸಮಿತಿ ಸಭೆಯ ನಡಾವಳಿ ಪ್ರತಿಯನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದಿನ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

<u>ನಿರ್ಣಯ:-</u>

ದಿನಾಂಕ: 25-03-2021 ರ ಬೆಂಗಳೂರು ನಗರ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಆಟೋರಿಕ್ಷಾ ದರಪರಿಷ್ಕರಣೆ ಸಂಬಂಧ ಉಪ ಪೊಲೀಸ್ ಆಯುಕ್ತರು, ಸಂಚಾರ (ಪೂರ್ವ) ವಿಭಾಗ, ಇವರ ಅಧ್ಯಕ್ಷತೆಯಲ್ಲಿ ಒಂದು ಉಪ ಸಮಿತಿಯನ್ನು ರಚಿಸಲು ನಿರ್ಣಯಿಸಿ, ಸಮಿತಿಯ ಸದಸ್ಯರನ್ನಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು (ಪಶ್ಚಿಮ), ಬೆಂಗಳೂರು (ದಕ್ಷಿಣ) ಮತ್ತು ಕಾನೂನು ಮಾಪನ ಶಾಸ್ತ್ರ ನಿಯಂತ್ರಕರು, ಬೆಂಗಳೂರು ಇವರನ್ನು ನೇಮಿಸಿ, ಹೆಚ್ಚುವರಿ ಕಾರ್ಯದರ್ಶಿ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಇವರನ್ನು ಸಮಿತಿಯ ಕಾರ್ಯದರ್ಶಿಗಳನ್ನಾಗಿ ನೇಮಿಸಲು ನಿರ್ಣಯಿಸಲಾಗಿತ್ತು. ಈ ಸಮಿತಿಯು ಸಭೆ ಸೇರಿ

ಸಾರ್ವಜನಿಕರು, ಆಟೋಚಾಲಕರು, ಆಟೋರಿಕ್ಷಾ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಅಹವಾಲುಗಳನ್ನು ಆಲಿಸಿ ದರ ಪರಿಷ್ಕರಣೆಯ ಬಗ್ಗೆ 30 ದಿನಗಳೊಳಗೆ [illegible] ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ ದಿನಾಂಕ : 08-07-2021 ರಂದು ಬೆಳಗ್ಗೆ 11-00 ಗಂಟೆಗೆ ಆಟೋರಿಕ್ಷಾ ದರ ಪರಿಷ್ಕರಣೆ ಸಂಬಂಧ ನಡೆದ ಉಪಸಮಿತಿಯು ಸಭೆ ಸೇರಿ ಆಟೋರಿಕ್ಷಾ ಬೆಲೆ ಏರಿಕೆ ಸಂಬಂಧ ಸಾರ್ವಜನಿಕರು, ಹಾಗೂ ವಿವಿಧ ಆಟೋರಿಕ್ಷಾ ಸಂಘ ಸಂಸ್ಥೆಗಳು ಹಾಗೂ ಆಟೋ ಚಾಲಕರ ಅಹವಾಲುಗಳನ್ನು ಆಲಿಸಿ ಸಮಿತಿಯು ಮಾಡಿರುವ ಶಿಫಾರಸ್ಸಿನ ವರದಿಯು ಈ ಕೆಳಕಂಡಂತಿರುತ್ತದೆ.

ಬಹುತೇಕ ಆಟೋರಿಕ್ಷಾ ಸಂಘಟನೆಗಳ ಪ್ರತಿನಿಧಿಗಳು, ಆಟೋಚಾಲಕರು ಆಟೋರಿಕ್ಷಾ ದರಪರಿಷ್ಕರಣೆಯನ್ನು ಮಾಡಬೇಕೆಂದು ಕೋರಿರುತ್ತಾರೆ. ಆದರೆ ಸಾರ್ವಜನಿಕರು ಆಟೋರಿಕ್ಷಾ ದರಪರಿಷ್ಕರಣೆಯನ್ನು ವಿರೋಧಿಸಿರುತ್ತಾರೆ. ಆಟೋರಿಕ್ಷಾ ಸಂಘಟನೆಗಳ ಮನವಿ, ಅಭಿಪ್ರಾಯ ಇವುಗಳನ್ನು ಸಮಿತಿಯು ವಿವರವಾಗಿ ಚರ್ಚಿಸಿ ಆಟೋರಿಕ್ಷಾ ಪ್ರತಿ ಕಿಲೋಮೀಟರಿಗೆ ತಗಲುವ ವೆಚ್ಚವನ್ನು ಈ ಕೆಳಕಂಡ ಅಂಶಗಳ ಹಿನ್ನೆಲೆಯಲ್ಲಿ ಸಮಿತಿಯು ಗಣನೆಗೆ ತೆಗೆದುಕೊಂಡಿರುತ್ತದೆ.

| ಕ್ರ.ಸಂ. | ವಿವರ | ಹಳೆ ದರ ರೂ.ಗಳಲ್ಲಿ (17-12-2013 ರಲ್ಲಿದ್ದಂತೆ) | ಹೊಸ ದರ ಹೆಚ್ಚಳವಾದುದು/ ರೂ.ಗಳಲ್ಲಿ | ಹೆಚ್ಚಳವಾಗಿರುವ ವ್ಯತ್ಯಾಸ ಶೇಕಡಾವಾರು/ ರೂ.ಗಳಲ್ಲಿ |
|---|---|---|---|---|
| 1. | ಹೊಸ ವಾಹನದ ಮುಖಬೆಲೆ | 1,25,000=00 | 2,10,000=00 | 85000=00 |
| 2. | ಆಟೋರಿಕ್ಷಾ ನೊಂದಣಿ ಶುಲ್ಕ | 300=00 | 1000=00 | 700=00 |
| 3. | ಅರ್ಹತಾಪತ್ರ ನವೀಕರಣ | 200=00 | 600=00 | 400=00 |
| 4. | ವಾಹನದ ವಿಮೆ | 4000=00 | 9000=00 | 5000=00 |
| 5. | ಕಂತು ಕರಾರು ನಮೂದು ಶುಲ್ಕ | 100=00 | 800=00 | 700=00 |
| 6. | ಎಲ್ ಪಿ ಜಿ ಗ್ಯಾಸ್ ಬೆಲೆ | 70=00 | 84=00 | 14=00 |
| 7. | ಆಟೋರಿಕ್ಷಾ ಬಿಡಿ ಭಾಗಗಳು | - | ಶೇಕಡಾ 30 ರಷ್ಟು ಹೆಚ್ಚಳ | ಶೇಕಡಾ 30 ರಷ್ಟು ಹೆಚ್ಚಳ |
| 8. | ಆಟೋಚಾಲಕರ ಮನೆ ಬಾಡಿಗೆ | 3000 ರಿಂದ 5000 | 8000 ರಿಂದ 10000 | ರೂ. 5000 ಹೆಚ್ಚಳ |
| 9. | ದಿನಬಳಕೆಯ ವಸ್ತುಗಳು | - | ಶೇಕಡಾ 100 ರಷ್ಟು ಹೆಚ್ಚಳ | ಶೇಕಡಾ 100 ರಷ್ಟು ಹೆಚ್ಚಳ |
| 10. | ಮಕ್ಕಳ ವಿದ್ಯಾಭ್ಯಾಸ ಶುಲ್ಕ | - | ಶೇಕಡಾ 50 ರಷ್ಟು ಹೆಚ್ಚಳ | ಶೇಕಡಾ 50 ರಷ್ಟು ಹೆಚ್ಚಳ |

ಮೇಲ್ಕಂಡ ಬೆಲೆ ಏರಿಕೆ ಅಂಶಗಳ ಜೊತೆಗೆ ಈ ಕೆಳಕಂಡ ಅಂಶಗಳನ್ನು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

1) ದಿನಾಂಕ: 17-12-2013 ರಿಂದ ಈವರೆವಿಗೆ ಹಲವು ಬಾರಿ ಇತರೆ ಸಾರ್ವಜನಿಕ ಸಾರಿಗೆ ಸೇವೆಗಳ ದರವನ್ನು (ಕೆ.ಎಸ್.ಆರ್.ಟಿ.ಸಿ, ಬಿ.ಎಂ.ಟಿ.ಸಿ ಮತ್ತು ಇತರೆ ಇತರೆ ಖಾಸಗಿ ವಾಹನಗಳ) ದರವನ್ನು ಇಂಧನ ಬೆಲೆ ಏರಿಕೆ ದರಕ್ಕೆ ಅನುಗುಣವಾಗಿ ಹೆಚ್ಚಳ ಮಾಡಲಾಗಿದ್ದು, ಆಟೋ ಮೀಟರ್ ದರಗಳಲ್ಲಿ ಈವರೆವಿಗೂ ಪರಿಷ್ಕರಣೆಯಾಗದಿರುವುದರಿಂದ ದರವನ್ನು ಪರಿಷ್ಕರಿಸಲು ಪರಿಗಣಿಸಬೇಕಾಗಿರುತ್ತದೆ.

2) ಹೊಸ ವಾಹನದ ಮುಖಬೆಲೆ, ಆಟೋರಿಕ್ಷಾ ನೊಂದಣಿ ಶುಲ್ಕ, ಅರ್ಹತಾಪತ್ರ ನವೀಕರಣ, ವಾಹನದ ವಿಮೆ, ಕಂತು ಕರಾರು ನಮೂದು ಶುಲ್ಕ, ಎಲ್ ಪಿ ಜಿ ಗ್ಯಾಸ್ ಬೆಲೆ ಆಟೋರಿಕ್ಷಾ ಬಿಡಿ ಭಾಗಗಳು ಇವುಗಳ ಬೆಲೆ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಆಟೋ ಮೀಟರ್ ದರವನ್ನು ಪರಿಷ್ಕರಿಸಬೇಕಾಗಿರುತ್ತದೆ.

3) ಕೋವಿಡ್-19 ರ ಕಾರಣದಿಂದಾಗಿ ಆಟೋ ಚಾಲಕರು ಸಹ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುತ್ತಾರೆ. ಆಟೋಚಾಲಕರು ತಮ್ಮ ಜೀವನ ನಿರ್ವಹಣೆಗಾಗಿ ಆಟೋ ವೃತ್ತಿಯ ಮೇಲೆ ಪೂರ್ಣವಾಗಿ ಅವಲಂಬಿತರಾಗಿರುತ್ತಾರೆ.

4) ಆಟೋ ಇಂಧನ ಬೆಲೆಯು ಆಗಿಂದಾಗ್ಗೆ ಬೆಲೆ ಏರಿಕೆಯಾಗಿದ್ದು, ಇದರಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಆದರೆ ಪ್ರತಿ ಆಟೋ ಇಂಧನ ಬೆಲೆ ಏರಿಕೆಗೆ ಅನುಗುಣವಾಗಿ ದರ ಪರಿಷ್ಕರಣೆಯಾಗಿರುವುದಿಲ್ಲ.

5) ದರ ಪರಿಷ್ಕರಿಸದೆ ಇದ್ದಲ್ಲಿ ಆಟೋ ಮೀಟರ್‌ಗಳನ್ನು ವಿರೂಪಗೊಳಿಸುವ ಪ್ರಕರಣಗಳು ಹೆಚ್ಚಾಗುತ್ತವೆ. ದರ ಪರಿಷ್ಕರಿಸಿದ್ದಲ್ಲಿ ಮೀಟರ್ ವಿರೂಪಗೊಳಿಸುವ ಪ್ರಕರಣಗಳು ಕಡಿಮೆಯಾಗುತ್ತದೆ.

6) ದರ ಪರಿಷ್ಕರಿಸಿದ್ದಲ್ಲಿ ಪ್ರಾಧಿಕಾರವು ಮೀಟರ್ ವಿರೂಪಗೊಳಿಸುವ ಚಾಲಕರ ಮತ್ತು ಆಟೋ ಮಾಲೀಕರ ಮೇಲೆ ಸೂಕ್ತ ಕ್ರಮ ಜರುಗಿಸಿ, ವಾಹನ ಹೊಂದಿರುವ ರಹದಾರಿಯನ್ನು ಅಮಾನತ್ತು ಕ್ರಮ ಕೈಗೊಳ್ಳಬಹುದಾಗಿರುತ್ತದೆ.

7) ಮಂಗಳೂರು ಮತ್ತು ಉಡುಪಿ ನಗರಗಳಲ್ಲಿ ಈಗಾಗಲೇ ಕನಿಷ್ಠ ದರ ರೂ.30/- (02 ಕಿ.ಮೀ) ಮತ್ತು ಪ್ರತಿ ಕಿಲೋ ಮೀಟರ್‌ಗೆ ರೂ.17/-- ನಿಗದಿಪಡಿಸಲಾಗಿರುತ್ತದೆ.

8) ಅಗ್ರಿಗೇಟರ್ಸ್ ಅಡಿಯಲ್ಲಿ ಓಡುವ ಆಟೋ ರಿಕ್ಷಾಗಳು ಅಗ್ರಿಗೇಟರ್ಸ್ ಗಳಿಗೆ ಶೇ.20% ರಷ್ಟು ಕಮೀಷನ್ ನೀಡಬೇಕಾಗಿರುತ್ತದೆ.

9) ಹೊಸ ಆಟೋರಿಕ್ಷಾ ಖರೀದಿಸಲು ಪಡೆದ ಸಾಲ ಮರುಪಾವತಿಯಲ್ಲಿ ಡಿಫಾಲ್ಟರ್‌ಗಳು ಹೆಚ್ಚಾಗುತ್ತಿದ್ದರಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲ ನೀಡಲು ಹಿಂಜರಿಯುತ್ತಿದ್ದು, ಖಾಸಗೀ ಫೈನಾನ್ಸ್ ಕಂಪನಿಗಳು ಶೇ.25% ಕ್ಕಿಂತ ಹೆಚ್ಚಿಗೆ ಬಡ್ಡಿಯನ್ನು ಪಡೆಯುತ್ತಿರುವುದರಿಂದ ಆಟೋರಿಕ್ಷಾ ಚಾಲಕರಿಗೆ ಹೆಚ್ಚಿನ ಆರ್ಥಿಕ ಹೊರೆಯಾಗಿರುತ್ತದೆ.

10) ಹೆಚ್ಚುತ್ತಿರುವ ಸಂಚಾರ ದಟ್ಟಣೆಯಿಂದ ಹೆಚ್ಚಿನ ಇಂಧನ ಬಳಕೆಯಾಗಿ ಆಟೋರಿಕ್ಷಾ ಚಾಲಕರಿಗೆ ಲಾಭ ಕಡಿಮೆಯಾಗಿರುತ್ತದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಮತ್ತು ಉಪ ಸಮಿತಿಯು ಆಟೋರಿಕ್ಷಾ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ನೀಡಿರುವ ಶಿಫಾರಸ್ಸಿನ ಅನ್ವಯ ಬೆಂಗಳೂರು ನಗರ ಜಿಲ್ಲೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ದಿನಾಂಕ: 01-12-2021 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ದರ ಪರಿಷ್ಕರಣೆ ಮಾಡಲು ನಿರ್ಣಯಿಸಿರುತ್ತದೆ.

| | ಹಾಲಿ ದರ | | | ಪರಿಷ್ಕೃತ ದರ | |
|---|---|---|---|---|---|
| 1 | ಕನಿಷ್ಠ ದರ ಮೊದಲ 1.9 ಕಿ.ಮೀ.ಗೆ ದರ | ರೂ.25/- (ರೂ.ಇಪ್ಪತ್ತೈದು ಮಾತ್ರ ಮೂರು ಜನ ಪ್ರಯಾಣಿಕರು) | 1 | ಕನಿಷ್ಠ ದರ ಮೊದಲ 2.00 ಕಿ.ಮೀ.ಗೆ ದರ | ರೂ.30/- (ರೂ.ಮೂವತ್ತು ಮಾತ್ರ) ಮೂರು ಜನ ಪ್ರಯಾಣಿಕರು |
| 2 | ನಂತರದ ಪ್ರತಿ ಕಿಲೋಮೀಟರ್ ದರ | ರೂ.13/- (ರೂ.ಹದಿಮೂರು ಮಾತ್ರ) ಮೂರು ಜನ ಪ್ರಯಾಣಿಕರು | 2 | ನಂತರದ ಪ್ರತಿ ಕಿಲೋಮೀಟರ್ ದರ | ರೂ.15/- (ರೂ.ಹದಿನೈದು ಮಾತ್ರ) ಮೂರು ಜನ ಪ್ರಯಾಣಿಕರು |
| 3 | ಕಾಯುವಿಕೆ ದರ | | 3 | ಕಾಯುವಿಕೆ ದರ | |
| | ಅ) ಮೊದಲ ಐದು ನಿಮಿಷ | ಉಚಿತ | | ಅ) ಮೊದಲ ಐದು ನಿಮಿಷ | ಉಚಿತ |
| | ಆ) ಮೊದಲ ಐದು ನಿಮಿಷದ ನಂತರ ಪ್ರತಿ ಹದಿನೈದು ನಿಮಿಷ ಅಥವಾ ಅದರ ಭಾಗಕ್ಕೆ | ರೂ.5/- | | ಆ) ಮೊದಲ ಐದು ನಿಮಿಷದ ನಂತರ ಪ್ರತಿ ಹದಿನೈದು ನಿಮಿಷ ಅಥವಾ ಅದರ ಭಾಗಕ್ಕೆ | ರೂ.5/- |
| 4 | ಪ್ರಯಾಣಿಕರ ಲಗೇಜು ದರ | | 4 | ಪ್ರಯಾಣಿಕರ ಲಗೇಜು ದರ | |
| | ಅ) ಮೊದಲ 20 ಕೆ.ಜಿ.ಗೆ | ಉಚಿತ | | ಅ) ಮೊದಲ 20 ಕೆ.ಜಿ.ಗೆ | ಉಚಿತ |
| | ಆ) ಮೊದಲ 20 ಕೆ.ಜಿ.ಯಿಂದ ನಂತರ ಪ್ರತಿ 20 ಕೆ.ಜಿ.ಗೆ ಅಥವಾ ಅದರ ಭಾಗಕ್ಕೆ | ರೂ.2/- | | ಆ) ಮೊದಲ 20 ಕೆ.ಜಿ.ಯಿಂದ ನಂತರ ಪ್ರತಿ 20 ಕೆ.ಜಿ.ಗೆ ಅಥವಾ ಅದರ ಭಾಗಕ್ಕೆ | ರೂ.5/- |
| | ಇ) ಗರಿಷ್ಠ ಪ್ರಯಾಣಿಕರ ಲಗೇಜುಗಳು 50 ಕೆ.ಜಿ. | | | ಇ) ಗರಿಷ್ಠ ಪ್ರಯಾಣಿಕರ ಲಗೇಜುಗಳು 50 ಕೆ.ಜಿ. | |
| | ರಾತ್ರಿ ವೇಳೆ ದರ | ಸಾಮಾನ್ಯ ದರ+ಸಾಮಾನ್ಯ ದರದ ಅರ್ಧ ಪಟ್ಟು ಹೆಚ್ಚು (ರಾತ್ರಿ 10-00 ರಿಂದ ಬೆಳಗಿನ ಜಾವ 5-00 ಘಂಟೆವರೆಗೆ) | | ರಾತ್ರಿ ವೇಳೆ ದರ | ಸಾಮಾನ್ಯ ದರ+ಸಾಮಾನ್ಯ ದರದ ಅರ್ಧಪಟ್ಟು ಹೆಚ್ಚು (ರಾತ್ರಿ 10-00 ರಿಂದ ಬೆಳಗಿನ ಜಾವ 5-00 ಘಂಟೆವರೆಗೆ) |

ಪ್ರಾಧಿಕಾರವು ಆಟೋರಿಕ್ಷಾ ಮೀಟರ್‌ಅನ್ನು ರೀಕ್ಯಾಲಿಬರೇಷನ್ ಮಾಡಿಸಲು ದಿನಾಂಕ: 01-12-2021 ರಿಂದ ಮೂರು ತಿಂಗಳ ಅವಧಿಯ ಕಾಲಾವಕಾಶ ನೀಡಿರುತ್ತದೆ. ನಿಯಂತ್ರಕರು, ಕಾನೂನುಮಾಪನ ಶಾಸ್ತ್ರ ಇಲಾಖೆ, ಬೆಂಗಳೂರು ಇವರು ಹಳೆಯ ಮತ್ತು ಹೊಸ ಪರಿಷ್ಕೃತ ತುಲನಾತ್ಮಕ ಆಟೋರಿಕ್ಷಾ ದರಪಟ್ಟಿಯನ್ನು ಸಿದ್ಧಪಡಿಸಿ ದಿನಾಂಕ: 20-11-2021 ರೊಳಗಾಗಿ ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು ನಗರ ಇವರಿಗೆ ಸಲ್ಲಿಸಲು ಸೂಚಿಸಲಾಯಿತು. ಈಗ ಆಟೋರಿಕ್ಷಾ ರಹದಾರಿ ಕಾರ್ಯವನ್ನು ಹೆಚ್ಚುವರಿ ಕಾರ್ಯದರ್ಶಿ, ಆಟೋರಿಕ್ಷಾ ರಹದಾರಿ ಮತ್ತು ಸಾರಿಗೆ ನಿಗಮ, ಶಾಂತಿ ನಗರ, ಬೆಂಗಳೂರು (ಕೆಎ-57) ಇವರು ನಿರ್ವಹಿಸುತ್ತಿರುವುದರಿಂದ ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ಅಧಿಕೃತವಾಗಿ ದೃಢೀಕರಿಸಿ ನೀಡಿದ ಆಟೋರಿಕ್ಷಾ ತುಲನಾತ್ಮಕ ಪರಿಷ್ಕೃತ ದರಪಟ್ಟಿಯನ್ನು ಹೆಚ್ಚುವರಿ ಕಾರ್ಯದರ್ಶಿ, ಆಟೋರಿಕ್ಷಾ ರಹದಾರಿ ಮತ್ತು ಸಾರಿಗೆ ನಿಗಮ, ಶಾಂತಿ ನಗರ, ಬೆಂಗಳೂರು (ಕೆಎ-57) ಇವರು ಬೆಂಗಳೂರಿನ ಎಲ್ಲಾ ಆಟೋರಿಕ್ಷಾ ರಹದಾರಿದಾರರಿಗೆ ರಹದಾರಿ ಪರಿಶೀಲಿಸಿ, ದರಪಟ್ಟಿಯಲ್ಲಿ ವಾಹನ ಸಂಖ್ಯೆ ನಮೂದಿಸಿ ವಿತರಿಸುವಂತೆ ಹಾಗೂ ಅಧಿಕೃತ ಪರಿಷ್ಕೃತ ದರಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ದೈನಂದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮವಹಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

<u>ಕ್ರಮ ಸಂಖ್ಯೆ 5, ವಿಷಯ ಸಂಖ್ಯೆ 2/2021-22</u>

ಮೆ. ಎ.ಎಂ.ಬಿ.ಟ್ರಾವೆಲ್ಸ್, #16, ಎಂ.ಐ.ಜಿ., ಬ್ರಹ್ಮಕುಮಾರಿ ರಸ್ತೆ, ಕೋರಮಂಗಲ, ಬೆಂಗಳೂರು-560095 ರವರು ತಮ್ಮ ಕಂಪನಿಯ ವಾಹನಗಳ ಮೇಲೆ ಜಾಹೀರಾತು ಪ್ರದರ್ಶಿಸಲು ಅನುಮತಿ ಕೋರಿರುವ ಕುರಿತು.

<u>ಟಿಪ್ಪಣಿ:-</u> ಮೆ. ಎ.ಎಂ.ಬಿ.ಟ್ರಾವೆಲ್ಸ್, ರವರು ಕಂಪನಿಯ 22 ಸಾರಿಗೆ ವಾಹನಗಳ ಮೂರು ಬದಿಯಲ್ಲಿ ಜಾಹೀರಾತು ಪ್ರಕಟಿಸಲು ಅನುಮತಿ ನೀಡಲು ಕೋರಿರುತ್ತಾರೆ. ಆದೇಶಕ್ಕಾಗಿ ಮಂಡಿಸಿದೆ.

<u>ಕ್ರಮ ಸಂಖ್ಯೆ 6 ವಿಷಯ ಸಂಖ್ಯೆ 3/2021-22</u>

M/s SOGO COMPUTERS PVT LTD,D/1, HAYES Court, Hayes Road, (OFF Richmond Road, Bangalore ಇವರು ಇ-ತ್ಯಾಜ್ಯ ವಿಲೇವಾರಿಯ ಬಗ್ಗೆ ಜಾಹೀರಾತನ್ನು ವಾಹನದ ಮೇಲೆ ಪ್ರದರ್ಶಿಸಲು ಅನುಮತಿ ಕೋರಿರುವ ಕುರಿತು.

ಟಿಪ್ಪಣಿ:- M/s SOGO COMPUTERS PVT LTD ರವರು ಕಂಪನಿಯ ಲಘು ಸಾರಿಗೆ ವಾಹನ ಸಂಖ್ಯೆ KA01-AJ-4583 ರ ಮೇಲೆ ಇ-ಚಾರ್ಜ್ ವಿಲೇವಾರಿಯ ಕುರಿತು ಸಾರ್ವಜನಿಕರಿಗೆ ಜಾಗೃತಿಗೊಳಿಸಲು ಜಾಹೀರಾತು ಪ್ರಕಟಿಸಲು ಅನುಮತಿ ನೀಡಲು ಕೋರಿರುತ್ತಾರೆ. ಆದೇಶಕ್ಕಾಗಿ ಮಂಡಿಸಿದೆ.

ಕ್ರಮ ಸಂಖ್ಯೆ 7 ವಿಷಯ ಸಂಖ್ಯೆ 4/2021-22

M/s Venkateshwara Hatcheries Private Limited, HEM'S PLACE, #232/233, Kyalasanahalli, Off Hennur Main Road,Byrathi, KR Puram Hobli, Bangalore-560077 ಇವರು ತಮ್ಮ ಉತ್ಪನ್ನಗಳ ಜಾಹೀರಾತನ್ನು ವಾಹನದ ಮೇಲೆ ಪ್ರದರ್ಶಿಸಲು ಅನುಮತಿ ಕೋರಿರುವ ಕುರಿತು.

ಟಿಪ್ಪಣಿ:- M/s Venkateshwara Hatcheries Private Limited, Bangalore ರವರು ಕಂಪನಿಯ 7 ಸಾರಿಗೆ ವಾಹನಗಳ ಮೇಲೆ ತಮ್ಮ ಕಂಪನಿಯ ಉತ್ಪನ್ನಗಳ ಜಾಹೀರಾತನ್ನು ಮತ್ತು ಡಿಸ್‌ಪ್ಲೇ ಬೋರ್ಡ್‌ನ್ನು ವಾಹನದ ಹಿಂಭಾಗದಲ್ಲಿ ಅಳವಡಿಸಿ ಡಿಸ್‌ಪ್ಲೇ ವಾಹನವನ್ನಾಗಿ ಉಪಯೋಗಿಸಲು ಅನುಮತಿ ನೀಡಲು ಕೋರಿರುತ್ತಾರೆ. ಆದೇಶಕ್ಕಾಗಿ ಮಂಡಿಸಿದೆ.

ಕ್ರಮ ಸಂಖ್ಯೆ 8 ವಿಷಯ ಸಂಖ್ಯೆ 5/2021-22

Sunbeam International School, # 8, Mylasandra, Begur Post, Bangalore-560068 ಇವರು ತಮ್ಮ ಶಾಲೆಯ ಜಾಹೀರಾತನ್ನು ವಾಹನ ಸಂಖ್ಯೆ ಕೆಎ51-ಡಿ-4262 ರ ಮೇಲೆ ಪ್ರದರ್ಶಿಸಲು ಅನುಮತಿ ಕೋರಿರುವ ಕುರಿತು.

ಟಿಪ್ಪಣಿ:- Sunbeam International School, Bangalore ರವರು ಶಾಲೆಯ ಸಾರಿಗೆ ವಾಹನದ ಮೇಲೆ ತಮ್ಮ ಶಾಲೆಯ ಜಾಹೀರಾತನ್ನು ಪ್ರಕಟಿಸಲು ಅನುಮತಿ ನೀಡಲು ಕೋರಿರುತ್ತಾರೆ. ಆದೇಶಕ್ಕಾಗಿ ಮಂಡಿಸಿದೆ.

ಕ್ರಮ ಸಂಖ್ಯೆ 9 ವಿಷಯ ಸಂಖ್ಯೆ 6/2021-22

Nippon Paint (India) Pvt Ltd., No.1/5, 2nd Crs Road, Hoysalanagar Main Road, Sunkadakatte, Vishwaneedam post, Bangalore-560091 ಇವರು ತಮ್ಮ ಕಂಪನಿಯ ಸಾರಿಗೆ ವಾಹನಗಳ ಮೇಲೆ ಜಾಹಿರಾತು ಪ್ರದರ್ಶಿಸಲು ಅನುಮತಿ ಕೋರಿರುವ ಕುರಿತು.

ಟಿಪ್ಪಣಿ:- Nippon Paint (India) Pvt Ltd., Bangalore ರವರು ಕಂಪನಿಯ ಸಾರಿಗೆ ವಾಹನದ ಮೇಲೆ ಜಾಹೀರಾತನ್ನು ಪ್ರಕಟಿಸಲು ಅನುಮತಿ ನೀಡಲು ಕೋರಿರುತ್ತಾರೆ. ಆದೇಶಕ್ಕಾಗಿ ಮಂಡಿಸಿದೆ.

ಕ್ರಮ ಸಂಖ್ಯೆ 10 ವಿಷಯ ಸಂಖ್ಯೆ 7/2021-22

Milky Mist Dairy Food Private Limited, C-52, 2nd B Main, 2nd Cross, Bommasandra Induatrial area, Bangalore-560099 ಇವರು ತಮ್ಮ ಕಂಪನಿಯ 75 ಸಾರಿಗೆ ವಾಹನಗಳ ಮೇಲೆ ಜಾಹಿರಾತು ಪ್ರದರ್ಶಿಸಲು ಅನುಮತಿ ಕೋರಿರುವ ಕುರಿತು.

ಟಿಪ್ಪಣಿ:- Milky Mist Dairy Food Private Limited, Bangalore ರವರು ಕಂಪನಿಯ 75 ಸಾರಿಗೆ ವಾಹನಗಳ ಮೇಲೆ ತಮ್ಮ ಉತ್ಪನ್ನಗಳ ಜಾಹೀರಾತನ್ನು ಪ್ರಕಟಿಸಲು ಅನುಮತಿ ನೀಡಲು ಕೋರಿರುತ್ತಾರೆ. ಆದೇಶಕ್ಕಾಗಿ ಮಂಡಿಸಿದೆ,

ಕ್ರಮ ಸಂಖ್ಯೆ 11 ವಿಷಯ ಸಂಖ್ಯೆ 8/2021-22

M/s Last Mile Production LLP, ಇವರು ತಮ್ಮ ಕಂಪನಿಯ 1 ಸಾರಿಗೆ ವಾಹನದ ಮೇಲೆ Nippon Paint ನ ಜಾಹಿರಾತು ಪ್ರದರ್ಶಿಸಲು ಅನುಮತಿ ಕೋರಿರುವ ಕುರಿತು.

ಟಿಪ್ಪಣಿ:- M/s Last Mile Production LLP, Bangalore ರವರು ಕಂಪನಿಯ ಸಾರಿಗೆ ವಾಹನದ ಮೇಲೆ ಜಾಹೀರಾತನ್ನು ಪ್ರಕಟಿಸಲು ಅನುಮತಿ ನೀಡಲು ಕೋರಿರುತ್ತಾರೆ. ಆದೇಶಕ್ಕಾಗಿ ಮಂಡಿಸಿದೆ,

ನಿರ್ಣಯ:- ಕ್ರಮ ಸಂಖ್ಯೆ 5 ರಿಂದ 11 ರವರೆಗಿನ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಜಾಹೀರಾತು ಪ್ರದರ್ಶನ ಸಂಬಂಧ ಕರ್ನಾಟಕ ಮೋಟಾರು ವಾಹನ ನಿಯಮಾವಳಿ ನಿಯಮ 127 ರ ಅನ್ವಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ನೀಡಲಾಗಿರುವ ಅಧಿಕಾರದಂತೆ ವಾಹನಗಳ ಮೇಲೆ ಸಂಸ್ಥೆಯ ಲೋಗೋ ಮತ್ತು ಜಾಹಿರಾತುಗಳನ್ನು ಅಳವಡಿಸಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಪ್ರತಿ ವಾಹನಕ್ಕೆ ವಾರ್ಷಿಕ ಶುಲ್ಕ ರೂ.5,000/- ರಂತೆ ನಿಗದಿಪಡಿಸಿ ಅನುಮತಿ ನೀಡಲು ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಇವರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲು ನಿರ್ಣಯಿಸಲಾಯಿತು.

ಷರತ್ತುಗಳು:-

1) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಪ್ರಕಾರ ವಾಹನಗಳ WIND SCREEN ಮತ್ತು SAFETY GLASS OF FRONT&REAR SIDES ಗಳ ಮೇಲೆ ಯಾವುದೇ ರೀತಿಯ ಬ್ಲಾಕ್ ಫಿಲಂ ಅಥವಾ ರೀತಿಯ ವಸ್ತುಗಳನ್ನು ಅಂಟಿಸುವಂತಿಲ್ಲ, ಹಾಗೆಯೆ ನಿಯಮ 100 (2) ರ ಪ್ರಕಾರ ವಾಹನಗಳ ಮುಂಭಾಗ ಮತ್ತು ಹಿಂಭಾಗದ WIND SCREEN ಗಳು ಶೇಕಡಾ 70 ರಷ್ಟು ಹಾಗೂ ಎರಡು ಬದಿಯ ಗಾಜುಗಳು ಶೇಕಡಾ 50 ರಷ್ಟು ಪಾರದರ್ಶಕತೆ ಕಡಿಮೆ ಇರದಂತೆ ಹೊಂದಿರಬೇಕಾಗಿರುತ್ತದೆ.

2) ಬೇರೆ ವಾಹನ ಚಾಲಕರ ಗಮನವನ್ನು ವಿಕೇಂದ್ರೀಕರಿಸುವಂತಹ ಅತ್ಯಾಕರ್ಷಕ, [illegible] ಪರದೆ ರಿಫ್ಲೆಕ್ಟರ್ಸ್, ಅಶ್ಲೀಲ ಚಿತ್ರಗಳು, ಚಿಹ್ನೆ, ಭಿತ್ತಿ ಪತ್ರ, ಬರಹಗಳಿಗೆ ಮುಂತಾದವುಗಳನ್ನು ಪ್ರದರ್ಶಿಸುವಂತಿಲ್ಲ.

3) ಅನುಮತಿಯು ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುತ್ತದೆ. ಅವಧಿ ಮುಗಿದ ನಂತರ ಶುಲ್ಕ ಪಾವತಿಸಿ ಅನುಮತಿಯನ್ನು ನವೀಕರಣ ಮಾಡಿಸಿಕೊಳ್ಳಬೇಕು.

4) ಜಾಹೀರಾತು ಪ್ರದರ್ಶಿಸುವ ಪ್ರತಿ ವಾಹನವು ಅನುಮತಿ ಪತ್ರ ಹೊಂದಿರತಕ್ಕದ್ದು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತನಿಖೆ ಮಾಡಿದಾಗ ಅವರ ಪರಿಶೀಲನೆಗೆ ಒದಗಿಸತಕ್ಕದ್ದು.

5) ವಾಹನದಲ್ಲಿ ಲೋಗೋ ಅಥವಾ ಜಾಹೀರಾತನ್ನು ವಾಹನದ 2 ಬದಿ ಹಾಗೂ ಹಿಂಬದಿಯಲ್ಲಿ ಅದರ ಒಟ್ಟು ವಿಸ್ತೀರ್ಣದ ಶೇ.60% ಮಾತ್ರ ಪ್ರದರ್ಶಿಸತಕ್ಕದ್ದು ಮತ್ತು ಶೇಕಡಾ 10% ರಷ್ಟು ಭಾಗದಲ್ಲಿ ವಾಯು ಮಾಲಿನ್ಯ, ಶಬ್ದ ಮಾಲಿನ್ಯ ಹಾಗೂ ರಸ್ತೆ ಸುರಕ್ಷತೆಗೆ ಸಂಬಂಧಪಟ್ಟ ನುಡಿ ವಾಕ್ಯಗಳನ್ನು ಪ್ರದರ್ಶಿಸತಕ್ಕದ್ದು.

6) ವಾಹನದ ಮೇಲೆ ಪ್ರದರ್ಶಿಸುವ ಯಾವುದೇ ಜಾಹೀರಾತಿನಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಅಳವಡಿಸಿಕೊಂಡಿರಬಾರದು ಹಾಗೂ ಪರಿಸರಕ್ಕೆ ಹಾನಿಯುಂಟಾಗುವ ಯಾವುದೇ ವಸ್ತುಗಳನ್ನು
ಬಳಸಬಾರದು.

7) ವಾಹನಕ್ಕೆ ನೀಡಲಾಗಿರುವ ಅನುಮತಿಯನ್ನು ಬೇರೆ ವಾಹನಕ್ಕೆ ಬದಲಾವಣೆಗೊಳಿಸಲು ಅಥವಾ ಬೇರೆಯವರಿಗೆ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ.

8) ವಾಹನದ ಮೇಲೆ ಜಾಹೀರಾತು ಪ್ರದರ್ಶನ ಸಂಬಂಧ ಬಿ.ಬಿ.ಎಂ.ಪಿ. ಹಾಗೂ ಇತರೆ ಸ್ಥಳೀಯ ಸಂಸ್ಥೆಗಳಿಂದ ಅಗತ್ಯವಿದ್ದಲ್ಲಿ ನಿರಾಪೇಕ್ಷಣಾ ಪತ್ರವನ್ನು ಪಡೆಯತಕ್ಕದ್ದು.

9) ಷರತ್ತುಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ ಅಥವಾ ಪೂರ್ವಾನುಮತಿಯಿಲ್ಲದೇ ಸಂಸ್ಥೆಯ ವಾಹನಗಳು ಜಾಹಿರಾತು ಪ್ರದರ್ಶಿಸುವುದು ಕಂಡುಬಂದಲ್ಲಿ ಸಂಸ್ಥೆಗೆ ನೀಡಿರುವ ಅನುಮತಿಯನ್ನು ಯಾವುದೇ ಕಾರಣ ನೀಡದೆ ರದ್ದುಗೊಳಿಸುವ ಅಧಿಕಾರವು ಪ್ರಾಧಿಕಾರಕ್ಕೆ ಇರುತ್ತದೆ.

<u>ಆದೇಶ ದಿನಾಂಕ: 06-11-2021</u>

(ಕೆ.ಎಂ.ಶಂಕರರಾಜು, ಭಾ.ಪೊ.ಸೇ)
ಸದಸ್ಯರು,
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
ಬೆಂಗಳೂರು ನಗರ ಜಿಲ್ಲೆ ಮತ್ತು
ಉಪ ಪೋಲೀಸ್ ಆಯುಕ್ತರು
(ಸಂಚಾರ ಪೂರ್ವ ವಿಭಾಗ).

(ಜೆ.ಮಂಜುನಾಥ್, ಭಾ.ಆ.ಸೇ)
ಅಧ್ಯಕ್ಷರು,
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮತ್ತು
ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ.

**ದಿನಾಂಕ:01-02-2022 ರಂದು ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮೈಸೂರು ಜಿಲ್ಲೆ, ಮೈಸೂರು ರವರ ಕಛೇರಿಯ ಸಭಾಂಗಣದಲ್ಲಿ ನಡೆದ ಆಟೋರಿಕ್ಷಾ ಬಾಡಿಗೆ ದರ ಪರಿಷ್ಕರಣೆ ಕುರಿತ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ನಡವಳಿ.**

ಉಪಸ್ಥಿತರು:

1. ಡಾ. ಬಗಾದಿ ಗೌತಮ್, ಭಾ.ಆ.ಸೇ.
   ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
   ಪ್ರಾದೇಶಿಕ ಸಾರಿಗೆ ಪ್ರಾಧಿಕಾರ,
   ಮೈಸೂರು ಜಿಲ್ಲೆ, ಮೈಸೂರು.
2. ಶ್ರೀ ಶಿವಕುಮಾರ್ ಆರ್.ದಂಡಿನ,
   ಅಪರ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು
   ಹಾಗೂ ಸದಸ್ಯರು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
   ಮೈಸೂರು ಜಿಲ್ಲೆ, ಮೈಸೂರು.
3. ಶ್ರೀ ಕೆ.ಎಂ. ಮಹದೇವಸ್ವಾಮಿ,
   ಸಹಾಯಕ ನಿರ್ದೇಶಕರು,
   ಕಾನೂನು ಮಾಪನ ಶಾಸ್ತ್ರ ಇಲಾಖೆ,
   ಮೈಸೂರು .
4. ಶ್ರೀ ತ್ಯಾಗರಾಜು, ಎಂ.
   ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಅಧಿಕಾರಿಗಳು
   ವಾರ್ತಾ ಇಲಾಖೆ,
   ಮೈಸೂರು.
5. ಶ್ರೀಮತಿ ಟಿ.ಜಿ.ಹೇಮಾವತಿ,
   ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳೂ,
   ಹುಣಸೂರು.
6. ಶ್ರೀ ಭೀಮನಗೌಡ ಪಾಟೀಲ,
   ಉಪಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ
   ಸಾರಿಗೆ ಅಧಿಕಾರಿ, ಮೈಸೂರು (ಪಶ್ಚಿಮ) ಹಾಗೂ
   ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ,
   ಮೈಸೂರು ಜಿಲ್ಲೆ, ಮೈಸೂರು.

*****

ವಿಷಯ ಸಂಖ್ಯೆ: 01/2021-22

ಮೈಸೂರು ನಗರ ಆಟೋ ಚಾಲಕರ ಮತ್ತು ಮಾಲೀಕರ ಒಕ್ಕೂಟ, ಇವರು, ಪ್ರಸ್ತುತ ಮೈಸೂರು ನಗರದಲ್ಲಿ ಚಾಲ್ತಿಯಲ್ಲಿರುವ ಆಟೋ ರಿಕ್ಷಾ ಬಾಡಿಗೆ ದರ ರೂ. 25.00 ಮತ್ತು ಪ್ರತಿ ಒಂದು ಕಿ.ಮೀ. ರೂ.13.00 ಇರುತ್ತದೆ. ನಗರದಲ್ಲಿ ಎಲ್.ಪಿ.ಜಿ. ಗ್ಯಾಸ್ ಬ್ಯಾಂಕುಗಳಲ್ಲಿ 1 ಲೀಟರ್ ಗೆ ರೂ. 69.00 ಆಗಿದ್ದು ಆಟೋ ಚಾಲಕರ ಬದುಕು ದುಸ್ತರವಾಗಿರುವುದರಿಂದ ಬೆಂಗಳೂರು ನಗರದಲ್ಲಿ ದಿನಾಂಕ:01-12-2021 ರಿಂದ ಜಾರಿಗೆ ಬಂದಿರುವ ಆಟೋ ಬಾಡಿಗೆ ದರ ಕನಿಷ್ಠ 2 ಕಿ.ಮೀ. ಗೆ ರೂ. 30.00 ಮತ್ತು ನಂತರ ಪ್ರತೀ ಕಿ.ಮೀ.ಗೆ 15.00 ಗಳಿಗೆ ಪರಿಷ್ಕರಿಸಲು ಕೋರಿ ದಿನಾಂಕ:07-12-2021 ರಂದು ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ, ಶ್ರೀ ಎಲ್.ನಾಗೇಂದ್ರ, ಮಾನ್ಯ ಶಾಸಕರು, ಚಾಮರಾಜ ನಿಧಾನಸಭಾ ಕ್ಷೇತ್ರ, ಮೈಸೂರು ಇವರು ದಿನಾಂಕ: 07-12-2021 ರಂದು ನೀಡಿರುವ ಪತ್ರದಲ್ಲಿ ಮೈಸೂರು ನಗರ ಆಟೋರಿಕ್ಷಾ ಚಾಲಕರು ಮತ್ತು ಮಾಲೀಕರ ಮನವಿಯಲ್ಲಿನ ವಿಷಯಗಳನ್ನು ಪ್ರಸ್ತಾಪಿಸಿ, ಇತ್ತೀಚಿನ ದಿನಗಳಲ್ಲಿ ಇಂಧನ ಮತ್ತು ಗ್ಯಾಸ್ ಬೆಲೆ ಅತಿ ಹೆಚ್ಚಾಗಿದ್ದು ಆಟೋ ಬಾಡಿಗೆ ದರಗಳು ಮಾತ್ರ ಹಿಂದಿನಂತೆಯೇ ಕಡಿಮೆ ದರದಲ್ಲಿ ಚಾಲನೆ ಮಾಡಿಕೊಂಡು ಜೀವನ ನಿರ್ವಹಣೆಗೆ ತೀವ್ರ ತೊಂದರೆಯಾಗಿರುವುದರಿಂದ ಬೆಂಗಳೂರು ನಗರದಲ್ಲಿ ಪರಿಷ್ಕರಿಸಿರುವಂತೆ ಮೈಸೂರು ನಗರದಲ್ಲಿನ ಆಟೋಗಳಿಗೆ ಕನಿಷ್ಟ ಮೀಟರ್ ದರ ರೂ.30.00 ಮತ್ತು ಪ್ರತೀ ಕಿ.ಮೀ. ಗೆ ರೂ.15.00 ಗಳನ್ನು ನಿಗಧಿಪಡಿಸಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಮುಂದಿನ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಅಧ್ಯಕ್ಷರು, ಮೈಸೂರು ಆಟೋರಿಕ್ಷಾ ಸರ್ವೀಸ್ ಟ್ರಸ್ಟ್,(ರಿ.) ನಂ.246,5ನೇ ಕ್ರಾಸ್, ಮಾನಸರ ರಸ್ತೆ, ಇಟ್ಟಿಗೆಗೂಡು, ಮೈಸೂರು-10 ಇವರು ದಿನಾಂಕ:22-12-2021 ರಂದು ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಿರುವ ಮನವಿಯಲ್ಲಿ, ಆಟೋರಿಕ್ಷಾ ಬಾಡಿಗೆ ದರವನ್ನು ಕಿ.ಮೀ.ರೂ.13.00 ರಿಂದ ರೂ.15.00 ಗಳಿಗೆ ಹೆಚ್ಚಿಸಲು ಕೋರಿರುತ್ತಾರೆ. ಮುಂದುವರೆದು, ಬಸ್ ಸ್ಟ್ಯಾಂಡ್ ಮತ್ತು ರೈಲ್ವೇ ನಿಲ್ದಾಣದಿಂದ ಹೊರಡುವ ಪ್ರೀಪೇಡ್ ಆಟೋಗಳಿಗೆ ಬರುವ ಗ್ರಾಹಕರಿಗೆ ನೀಡುವ ಚೀಟಿಯಲ್ಲಿ ನಮೂದಿಸುವ ಪ್ರಯಾಣದ ಕಿ.ಮೀ. ದೂರದ ವಿವರದಲ್ಲಿ ನ್ಯೂನತೆ ಇದ್ದು ಪ್ರೀಪೇಡ್ ನಲ್ಲಿ ಮರು ಸರ್ವೇ ನಡೆಸಿ ಅದರಂತೆ ಈಗಿನ ದರವನ್ನು ನಿಗಧಿ ಮಾಡಿಕೊಡಲು ಸಂಬಂಧ ಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿರುವುದನ್ನು ಪ್ರಾಧಿಕಾರದ ಅವಗಾಹನೆಗೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ:

ಮೇಲಿನ ಪತ್ರಗಳಲ್ಲಿನ ವಿಷಯಗಳನ್ನು ಪ್ರಾಧಿಕಾರವು ಕೂಲಂಕುಶವಾಗಿ ಪರಿಶೀಲಿಸಿರುತ್ತದೆ. ಆಟೋರಿಕ್ಷಾ ಬಾಡಿಗೆ ದರ ಪರಿಷ್ಕರಣೆ ಕುರಿತಂತೆ ಮೈಸೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ದಿನಾಂಕ:07-01-2014 ರಂದು ನಡೆದ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನದ ನಡಾವಳಿಯನ್ನು ಸಹ ಪರಿಶೀಲಿಸಿದೆ. ಮೈಸೂರು ನಗರದಲ್ಲಿ ಆಟೋ ಬಾಡಿಗೆ ದರವನ್ನು ಪರಿಷ್ಕರಿಸಿ ಸರಿ ಸುಮಾರು ಎಂಟು ವರ್ಷಗಳು ಆಗಿದ್ದು ಪ್ರಸ್ತುತ ಬಾಡಿಗೆ ದರವನ್ನು ಪರಿಷ್ಕರಿಸಲು ಕೋರಿರುವುದು ಮತ್ತು ಬೆಂಗಳೂರು ನಗರಕ್ಕೆ ಪ್ರಾಧಿಕಾರವು ನಿಗಧಿಪಡಿಸಿರುವ ದರಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿ ಸಂಘ/ಒಕ್ಕೂಟಗಳ ಕೋರಿಕೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕಾನೂನು ಮಾಪನ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳ ಅಭಿಪ್ರಾಯ ಕೇಳಲಾಗಿ, ಬಾಡಿಗೆ ದರ ಪರಿಷ್ಕರಣೆ ಮಾಡಲು ತಮ್ಮ ಇಲಾಖೆಯ ಆಕ್ಷೇಪಣೆ ಏನೂ ಇಲ್ಲವೆಂಬ ಅಭಿಪ್ರಾಯವನ್ನು ಪರಿಗಣಿಸಿ ಮೈಸೂರು ಜಿಲ್ಲೆಗೆ ಅನ್ವಯವಾಗುವಂತೆ ಆಟೋರಿಕ್ಷಾ ಬಾಡಿಗೆ ದರವನ್ನು ಪರಿಷ್ಕರಿಸಿ ಪ್ರಾಧಿಕಾರವು ಒಮ್ಮತದಿಂದ ನಿರ್ಣಯಿಸಿರುತ್ತದೆ. ಪರಿಷ್ಕರಣ ದರದಂತೆ ಮೀಟರ್ ಗಳನ್ನು ಸತ್ಯಾಪನೆ (ರೀಕ್ಯಾಲಿಬರೇಟ್) ಮಾಡುವ ಬಗ್ಗೆ ಕಾನೂನು ಮಾಪನಾ ಶಾಸ್ತ್ರ ಇಲಾಖೆ ಅಗತ್ಯ ಕ್ರಮ ವಹಿಸುವುದು.

(ಕ್ರಮ: ಸಾರಿಗೆ, ಪೊಲೀಸ್ ಕಾನೂನು ಮಾಪನ ಶಾಸ್ತ್ರ ಇಲಾಖೆ)

## ಸಭೆಯಲ್ಲಿ ಚರ್ಚಿಸಲಾದ ಇತರೇ ವಿಷಯಗಳು

(1) ಸಭೆಯಲ್ಲಿ ಹಾಜರಿದ್ದ ಆಟೋರಿಕ್ಷಾ ಮಾಲೀಕರು ಹಾಗೂ ಚಾಲಕರ ಸಂಘಗಳ ಪದಾಧಿಕಾರಿಗಳು ತಮ್ಮ ಕುಂದು-ಕೊರತೆಗಳ ಬಗ್ಗೆ ಅವಹಾಲು ಸಲ್ಲಿಸುವ ಸಲುವಾಗಿ ಸಾರಿಗೆ ಅದಾಲತ್‌ನ್ನು ನಿಯಮಿತವಾಗಿ ನಡೆಸುವಂತೆ ಮನವಿ ಮಾಡಿರುವುದನ್ನು ಪ್ರಾಧಿಕಾರವು ಸಮ್ಮತಿಸಿ ಸಂಬಂಧಿಸಿದ ಸಾರಿಗೆ, ಪೊಲೀಸ್ ಇಲಾಖೆ ವತಿಯಿಂದ ನಿಯಮಾನುಸಾರ ಕಾಲಕಾಲಕ್ಕೆ ಸಾರಿಗೆ ಅದಾಲತ್ ಕಾರ್ಯಕ್ರಮ ನಡೆಸಲು ಸೂಚನೆ ನೀಡಿತು.

(ಕ್ರಮ: ಸಾರಿಗೆ ಮತ್ತು ಪೊಲೀಸ್ ಇಲಾಖೆ)

(2) ಮೈಸೂರು ನಗರದಲ್ಲಿ ರ್‍ಯಾಪಿಡೂ ಮೋಟಾರ್ ಬೈಕ್‌ಗಳ ಹಾವಳಿ ಹೆಚ್ಚಾಗಿದ್ದು ಇದರಿಂದಾಗಿ ಬಾಡಿಗೆಗೆ ಆಟೋರಿಕ್ಷಾ ಗಳನ್ನು ಬಳಸಿಕೊಳ್ಳುವುದು ಗಣನೀಯವಾಗಿ ಕಡಿಮೆಯಾಗಿದ್ದು ಆಟೋ ಚಾಲಕರು ಬಾಡಿಗೆ ಇಲ್ಲದೇ ಕಷ್ಟಕರವಾಗಿ ಜೀವನ ಸಾಗಿಸುವ ಪರಿಸ್ಥಿತಿಯುಂಟಾಗಿರುವುದನ್ನು ತಡೆಗಟ್ಟಲು ಕ್ರಮವಹಿಸುವಂತೆ ಕೋರಿರುವ ಕುರಿತಂತೆ, ಸಾರಿಗೆ ಹಾಗೂ ಪೊಲೀಸ್ ಇಲಾಖೆಯಿಂದ ಇಂತಹ ವಾಹನಗಳ ತಪಾಸಣೆ ನಡೆಸಲು ಕ್ರಮ ವಹಿಸುವಂತೆ ತಿಳಿಸಿದ ಸಂದರ್ಭದಲ್ಲಿ, ಇಂತಹ ವಾಹನಗಳ ಸಂಚಾರಕ್ಕೆ ಸ್ಪಷ್ಟ ನಿರ್ದೇಶನ ಸರ್ಕಾರದಿಂದ ಅಗತ್ಯವಿದ್ದು ಈ ಬಗ್ಗೆ ಲಿಖಿತ ದೂರು ಬಂದಲ್ಲಿ ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಪೊಲೀಸ್ ಇಲಾಖೆ ಅಧಿಕಾರಿಗಳು ಸಭೆಗೆ ತಿಳಿಸಿರುತ್ತಾರೆ. ಅಂತಯೇ, ಅಗತ್ಯ ಕ್ರಮವಹಿಸುವಂತೆ ಪ್ರಾಧಿಕಾರವು ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡಿರುತ್ತದೆ.

(ಕ್ರಮ: ಸಾರಿಗೆ ಮತ್ತು ಪೊಲೀಸ್ ಇಲಾಖೆ)

(3) ಕೋವಿಡ್-19 ರ ಹಿನ್ನೆಲೆಯಲ್ಲಿ ಆಟೋರಿಕ್ಷಾ/ಟ್ಯಾಕ್ಸಿ/ಮ್ಯಾಕ್ಸಿಕ್ಯಾಬ್ ಚಾಲಕರಿಗೆ ಪರಿಹಾರ ಇನ್ನೂ ದೊರೆತಿಲ್ಲ ಎಂದು ಆಟೋರಿಕ್ಷಾ ಚಾಲಕರು, ಸಭೆಯ ಗಮನಕ್ಕೆ ತಂದಾಗ ಈ ಯೋಜನೆಗೆ ಸಂಬಂಧಿಸಿದಂತೆ ಚಾಲ್ತಿ ಚಾಲನಾ ಅನುಜ್ಞಾ ಪತ್ರಗಳ ದೂರುಗಳನ್ನು ಕಛೇರಿ ವತಿಯಿಂದ ಪರಿಹರಿಸಿದ್ದು ಮುಂದೆ ಇಂತಹ ಸಮಸ್ಯೆಗಳನ್ನು ಇಲಾಖೆಗೆ ಸಲ್ಲಿಸಿದಲ್ಲಿ ಪರಿಹರಿಸಲು ಅಗತ್ಯ ಕ್ರಮ ವಹಿಸುವುದಾಗಿ ಉಪಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮೈಸೂರು (ಪಶ್ಚಿಮ) ಇವರು ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸಿರುತ್ತಾರೆ. ವಿಷಯವನ್ನು ಆಲಿಸಿದ ಮಾನ್ಯ ಜಿಲ್ಲಾಧಿಕಾರಿಗಳು ಕೋವಿಡ್-19 ರ ಸಂದರ್ಭದಲ್ಲಿ ಸರ್ಕಾರ ಅನೇಕ ವಿನಾಯ್ತಿಗಳನ್ನು ಘೋಷಿಸಿರುವ ಪ್ರಕಾರ ಅವುಗಳ ಸೌಲಭ್ಯಗಳನ್ನು ವಿಳಂಬವಿಲ್ಲದಂತೆ ಅರ್ಹರಾದವರಿಗೆ ಒದಗಿಸುವಂತೆ ಸಂಬಂಧಪಟ್ಟ ಇಲಾಖೆಗೆ ಸೂಚನೆ ನೀಡಿರುತ್ತಾರೆ.

(ಕ್ರಮ: ಸಾರಿಗೆ ಇಲಾಖೆ)

(4) ಪ್ರೀಪೇಡ್ ಆಟೋ ನಿಲ್ದಾಣಗಳಲ್ಲಿ ಗ್ರಾಹಕರು ಸೇರುವ ಸ್ಥಳದ ದೂರದ ಕಿ.ಮೀ. ನಲ್ಲಿ ವ್ಯತ್ಯಾಸವಿದ್ದು ಇದರಿಂದ ಆಟೋ ಚಾಲಕರಿಗೆ ಆರ್ಥಿಕವಾಗಿ ನಷ್ಟವಾಗುತ್ತಿರುವುದರಿಂದ ಸ್ಥಳಗಳ ದೂರದ ಕಿ.ಮೀ. ನ್ನು ಮರು ಸರ್ವೆ ಮಾಡಿ ಪ್ರೀಪೇಡ್ ದರಗಳನ್ನು ಪರಿಷ್ಕೃತ ದರಕ್ಕೆ ನಿಗಧಿಪಡಿಸಲು ಆಟೋರಿಕ್ಷಾ ಚಾಲಕರ ಸಂಘದ ಮನವಿಯನ್ನು ಆಲಿಸಿದ ಪ್ರಾಧಿಕಾರವು ಮೈಸೂರು ನಗರದ ವಿವಿಧ ಬಡಾವಣೆಗಳಿಗೆ ಇರುವ ಕಿ.ಮೀ. ದೂರವನ್ನು ಸರ್ವೆ ಮಾಡಿ ನ್ಯೂನತೆಯನ್ನು ಸರಿಪಡಿಸಲು ಪೊಲೀಸ್ ಇಲಾಖೆಗೆ (ಸಂಚಾರ) ಪ್ರಾಧಿಕಾರವು ಸೂಚನೆ ನೀಡಿದೆ.

(ಕ್ರಮ: ಪೊಲೀಸ್ ಇಲಾಖೆ (ಸಂಚಾರ) ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆ)

## ಆಟೋರಿಕ್ಷಾ ಬಾಡಿಗೆ ದರ ಪರಿಷ್ಕರಣೆ ಕುರಿತಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮೈಸೂರು ಜಿಲ್ಲೆ, ಮೈಸೂರು- ಇವರ ನಡವಳಿ

ಸಂಖ್ಯೆ:ಪ್ರಾಸಾಪ್ರಾ/ಮೈಜಿ/ಆ.ರಿ.ಬಾಡಿಗೆ ದರ/ವಿಷಯ ಸಂಖ್ಯೆ:01/2021-22 ದಿನಾಂಕ:01-02-2022

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವರದಿ ತಯಾರಿಕೆಯಲ್ಲಿ ಅನುಸರಿಸಿರುವ ಮಾರ್ಗ ಮತ್ತು ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಆಟೋ ರಿಕ್ಷಾಗಳ ವಾಹನಗಳ ಮೇಲಿನ ನಿಗಧಿತ ವೆಚ್ಚ, ವಿಮೆ, ತೆರಿಗೆ, ಅರ್ಹತಾ ಪತ್ರ, ರಹದಾರಿ, ವಾಹನದ ನಿರ್ವಹಣಾ ವೆಚ್ಚ, ಇಂಧನದ ವೆಚ್ಚ, ಕಾರ್ಮಿಕ ವೇತನ ಹಾಗೂ ಇನ್ನಿತರ ವೆಚ್ಚಗಳ ಏರಿಳಿತಗಳನ್ನು ಗಣನೆಗೆ ತೆಗೆದುಕೊಂಡು ಮಾಡಿರುವ ಲೆಕ್ಕಾಚಾರದ ವಿವರಗಳನ್ನು ಪರಿಶೀಲಿಸಿ ಇದು ಹೆಚ್ಚು ವೈಜ್ಞಾನಿಕವಾಗಿರುವುದನ್ನು ಪ್ರಾಧಿಕಾರ ದೃಢಪಡಿಸಿಕೊಂಡಿರುತ್ತದೆ. ಅಲ್ಲದೆ ಈ ಹೆಚ್ಚಳವು ಇತ್ತೀಚೆಗೆ ಪೆಟ್ರೋಲ್ ಮತ್ತು ಡೀಸಲ್ ಹಾಗೂ ಇನ್ನಿತರ ವೆಚ್ಚಗಳಲ್ಲಿ ಉಂಟಾಗಿರುವ ಏರಿಕೆಯನ್ನು ಸಹಾ ಪ್ರಾಧಿಕಾರವು ಗಮದಲ್ಲಿಸಿರಿಸಿದೆ. ಈ ಎಲ್ಲಾ ಅಂಶಗಳು ಹಾಗೂ ಅಹವಾಲುಗಳನ್ನು ಗಣನೆಗೆ ತೆಗೆದುಕೊಂಡ ಪ್ರಾಧಿಕಾರ ಇಂದಿನಿಂದಲೇ ಜಾರಿಗೆ ಬರುವಂತೆ ಆಟೋರಿಕ್ಷಾ ವಾಹನಗಳ ಪ್ರಯಾಣ ದರವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿರ್ಣಯ ಮಾಡಿದೆ. ಹಾಗೂ ಸಂಬಂಧಿಸಿದ ನಿಬಂಧನೆಗಳನ್ನು ವಿಧಿಸಿರುತ್ತದೆ.

1. ಕನಿಷ್ಠ- ಮೊದಲ 2-00 ಕಿ.ಮೀ.ಗೆ
   (ಮೂರು ಪ್ರಯಾಣಿಕರಿಗೆ) - ರೂ.30/-
2. ಪ್ರತಿ ಕಿ.ಮೀ. ದರ
   (ಮೂರು ಪ್ರಯಾಣಿಕರಿಗೆ) - ರೂ.15/-
3. ಕಾಯುವ ದರ ಮೊದಲ ಐದು ನಿಮಿಷ - ಉಚಿತ
4. ನಂತರದ ಪ್ರತಿ 15 ನಿಮಿಷ ಅಥವಾ ಅದರ ಭಾಗಕ್ಕೆ - ರೂ.5/-
5. ಲಗ್ಗೇಜು ದರಗಳು-20 ಕೆ.ಜಿ. ವರೆಗೆ - ಉಚಿತ
6. ನಂತರದ ಪ್ರತಿ 20 ಕಿಲೋ ಗ್ರಾಂ ಅಥವಾ ಅದರ ಭಾಗಕ್ಕೆ - ರೂ.5/-
7. ಪ್ರಯಾಣಿಕರ ಗರಿಷ್ಠ ಲಗ್ಗೇಜು - 50 ಕೆ.ಜಿ.
8. ರಾತ್ರಿ ವೇಳೆ ದರ- ಸಾಮಾನ್ಯ ದರ+ಸಾಮಾನ್ಯ ದರದ ಅರ್ಧಪಟ್ಟು ಹೆಚ್ಚು.
   (10-00 ರಿಂದ ಬೆಳಗಿನ ಜಾವ 5-00 ಗಂಟೆಯವರೆಗೆ)
9. ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟಿರುವ ನಿಗದಿತ ಪರಿಷ್ಕೃತ ದರದ ಮೂಲ ಪಟ್ಟಿಯನ್ನು ಪ್ರತಿಯೊಂದು ಆಟೋರಿಕ್ಷಾದಲ್ಲಿ ಪ್ರಮುಖ ಸ್ಥಾನದಲ್ಲಿ ಪ್ರದರ್ಶಿಸಬೇಕು.
10. ಈ ಪರಿಷ್ಕೃತ ದರಗಳು ದಿನಾಂಕ: 01-02-2022 ರಿಂದ ಜಾರಿಗೆ ಬರುತ್ತದೆ.
11. ಪರಿಷ್ಕೃತ ದರಗಳಿಗೆ ಅನುಗುಣವಾಗಿ ಮೀಟರ್ ಗಳನ್ನು ದಿನಾಂಕ: 01-02-2022 ರಿಂದ ಎರಡು ತಿಂಗಳ ಒಳಗಾಗಿ ಸತ್ಯಾಪನೆ (ರೀಕ್ಯಾಲಿಬರೇಟ್) ಯನ್ನು ಮಾಡಿಕೊಳ್ಳತಕ್ಕದ್ದು.

| | |
|---|---|
| ಪೋಲೀಸ್ ಅಧೀಕ್ಷಕರು ಹಾಗೂ ಸದಸ್ಯರು, | ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು |
| ಪ್ರಾದೇಶಿಕ ಸಾರಿಗೆ ಪ್ರಾಧಿಕಾರ | ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, |
| ಮೈಸೂರು ಜಿಲ್ಲೆ, ಮೈಸೂರು | ಮೈಸೂರು ಜಿಲ್ಲೆ, ಮೈಸೂರು |

RTA-1

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ,
ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು – 575 001.

ಕರ್ನಾಟಕ ಸರಕಾರ

Deputy Commissioner &
District Magistrate's Office.
Dakshina Kannada District.
Mangaluru – 575 001.

ಸಂ:ಆರ್‌ಟಿಎ:ಒಆರ್:234/2022/204083/ಒ9

ದಿನಾಂಕ: 27-10-2022

# : ಅಧಿಸೂಚನೆ:

ಮಂಗಳೂರು ದ.ಕ. ಜಿಲ್ಲೆಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಆಟೋರಿಕ್ಷಾ ಚಾಲನೆಯ ವಿವಿಧ ಅಂಶಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚರಿಸುವ ಆಟೋರಿಕ್ಷಾಗಳ ದರಗಳನ್ನು ಕೆಳಕಂಡಂತೆ ಪರಿಷ್ಕರಣೆ ಮಾಡಿ ದಿನಾಂಕ <u>15-11-2022</u> ರಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ, ಆಟೋರಿಕ್ಷಾ ಚಾಲಕರ/ ಮಾಲಕರ ಹಾಗೂ ಆಟೋರಿಕ್ಷಾಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು **ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು** ಈ ಹಿಂದೆ ದಿನಾಂಕ: **27-02-2020** ರಂದು ನಿಗದಿ ಪಡಿಸಿದ ಆಟೋರಿಕ್ಷಾ ದರಗಳನ್ನು ಪುನರ್ ಪರಿಷ್ಕರಿಸಿ, ದ.ಕ.ಜಿಲ್ಲೆಯಲ್ಲಿ ಸಂಚರಿಸುವ ಆಟೋರಿಕ್ಷಾಗಳ ಪ್ರಯಾಣ ದರಗಳನ್ನು **<u>ದಿನಾಂಕ:15-11-2022</u>** ರಿಂದ ಅನ್ವಯವಾಗುವಂತೆ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಪ್ರಯಾಣದ ದರವನ್ನು ನಿಗದಿ ಪಡಿಸಲಾಗಿರುತ್ತದೆ.

| | |
|---|---|
| ಕನಿಷ್ಠ ದರ ಮೊದಲ 1.5 ಕಿ.ಮೀ. | ರೂ. 35-00 (ಗರಿಷ್ಠ 3 ಜನ ಪ್ರಯಾಣಿಕರು) |
| ನಂತರದ ಪ್ರತಿ ಕಿ.ಮೀಟರ್ ದರ | ರೂ. 17-00 (ಗರಿಷ್ಠ 3 ಜನ ಪ್ರಯಾಣಿಕರು) |
| ಕಾಯುವ ದರಗಳು | ಮೊದಲ 15 ನಿಮಿಷ ಉಚಿತ,<br>ನಂತರದ 15 ನಿಮಿಷದವರೆಗೆ ರೂ. 5-00 |
| ಪ್ರಯಾಣಿಕರ ಸರಕಿಗೆ (ಲಗೇಜ್) | 1) ಒಬ್ಬ ಪ್ರಯಾಣಿಕ ಕಡ್ಡಾಯವಾಗಿ ಜೊತೆ ಇರಬೇಕು.<br>2) ಮೊದಲ 20 ಕಿ.ಗ್ರಾಂ. ಗಳಿಗೆ ಉಚಿತ ಹಾಗೂ ನಂತರ ರೂ.5-00 ಹಾಗೂ ಭಾಗದಂತೆ. |
| ರಾತ್ರಿ ವೇಳೆ ದರ | ರಾತ್ರಿ 10.00 ಗಂಟೆಯಿಂದ ಬೆಳಗಿನ ಜಾವ 05.00 ಗಂಟೆಯ ವರೆಗೆ ಮಾತ್ರ ಈ ಮೇಲಿನ ದರದ ಒಂದೂವರೆ ಪಟ್ಟು ದರವನ್ನು ಪ್ರಯಾಣಿಕರಿಂದ ಪಡೆಯಲು ಅವಕಾಶವಿದೆ. |

1) ಪರಿಷ್ಕೃತ ದರಗಳು ನವೆಂಬರ್ (15-11-2022) ರಿಂದ ಜಾರಿಗೆ ಬರಲಿದೆ. ದಿನಾಂಕ: 15-11-2022 ರಿಂದ ಒಂದು ತಿಂಗಳ ಒಳಗಾಗಿ ಎಲ್ಲಾ ಆಟೋರಿಕ್ಷಾ Fare Meter ನಲ್ಲಿ ಸತ್ಯಾಪನೆ ಮಾಡಿ ಮುದ್ರೆ ಹಾಕಿಸಿಕೊಳ್ಳುವುದು. ತೂಕ ಮತ್ತು ಮಾಪನ ಶಾಸ್ತ್ರ ಇಲಾಖೆಯಿಂದ ದೃಢೀಕರಿಸಿಕೊಳ್ಳಲು ಸೂಚಿಸಲಾಗಿದೆ.
2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ದರದ ಪಟ್ಟಿಯನ್ನು ಪ್ರತಿಯೊಂದು ಆಟೋರಿಕ್ಷಾಗಳಲ್ಲಿಯೂ ಪ್ರದರ್ಶಿಸಬೇಕು.
3) ಆಟೋರಿಕ್ಷಾ ಚಾಲಕ ಮಾಲೀಕರು ತಮ್ಮ ಆಟೋರಿಕ್ಷಾಗಳ ಪ್ಲಾಗ್ ಮೀಟರ್‌ಲ್ಲಿ ಮರು ನಿಗದಿ ಪಡಿಸಿದ ದರವನ್ನು ರಿಕ್ಯಾಲಿಬರೇಷನ್ ಹಾಗೂ ಸೀಲ್ ಮಾಡಿಕೊಂಡು ಪ್ರಯಾಣಿಕರಿಂದ ಪ್ರಯಾಣಕ್ಕೆ ತಕ್ಕಂತೆ ಪರಿಷ್ಕರಿಸಿದ ಮೀಟರ್ ದರವನ್ನು ಪಡೆದುಕೊಳ್ಳುವಂತೆ ಆದೇಶಿಸಲಾಗಿದೆ.

Website: www.dk.nic.in Phone: 0824-2220588 Fax: 0824-2441564 Email: dc.mnglr@gmail.com

4) ಪ್ರಯಾಣಿಕರು ಪ್ರಯಾಣಿಸುವ ಸ್ಥಳಗಳಿಗೆ ಹೋಗಲು ನಿರಾಕರಿಸಿದಲ್ಲಿ ಹಾಗೂ ಸಾರ್ವಜನಿಕ ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸಿದಲ್ಲಿ, ಅಂತಹ ಚಾಲಕರ ವಿರುದ್ಧ ಕಾನೂನಿನಂತೆ ದಂಡ ವಿಧಿಸುವುದು/ಪರವಾನಿಗೆ ಅಮಾನತ್ತು/ ರದ್ದತಿ ಕುರಿತು ಕ್ರಮ ಕೈಗೊಳ್ಳುವುದು ಹಾಗೂ ಇತರೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಪೊಲೀಸ್ ಇಲಾಖಾ ಅಧಿಕಾರಿಗಳಿಗೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

5) ಅಧಿಕ ದರ ವಸೂಲು ಮಾಡಿದಲ್ಲಿ, ಸಾರ್ವಜನಿಕರು ದೂರುಗಳನ್ನು ಕಛೇರಿ ದೂರವಾಣಿ ಸಂಖ್ಯೆ: 0824-2220577, ಅಥವಾ E-mail: rtomng-ka@nic.in (ಮಂಗಳೂರು) ಸಂ:08251-230729 E-mail: rtoputtur@Yahoo.com (ಪುತ್ತೂರು) ಹಾಗೂ ಸಂ:08255-280504 E-mail: artobantwal@gmail.com (ಬಂಟ್ವಾಳ) ಇವರಿಗೆ ನೀಡುವಂತೆ ಕೋರಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಸ್ವಹಸ್ತ ಹಾಗೂ ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

**ಅಧ್ಯಕ್ಷರು**
**ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಹಾಗೂ**
**ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.**

ಇವರಿಗೆ,

ಪ್ರಾದೇಶಿಕ ಸಾರಿಗೆ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು- ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ

ಪ್ರತಿ:-

1. ಪೊಲೀಸ್ ಆಯುಕ್ತರು, ಮಂಗಳೂರು ನಗರ, ಮಂಗಳೂರು
2. ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.
3. ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು.
4. ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬಂಟ್ವಾಳ
5. ಸಹಾಯಕ ನಿಯಂತ್ರಕರು, ತೂಕ ಮತ್ತು ಮಾಪನಾ ಶಾಸ್ತ್ರ ಇಲಾಖೆ, ಮಂಗಳೂರು
6. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಮಂಗಳೂರು- ಈ ಅಧಿಸೂಚನೆಯನ್ನು ಎಲ್ಲಾ ಪತ್ರಿಕೆಗಳಲ್ಲಿ ಉಚಿತವಾಗಿ ಜರೂರು ಪ್ರಕಟಿಸುವ ಬಗ್ಗೆ.
7. ಸಹಾಯಕ ನಿರ್ದೇಶಕರು, ಸರಕಾರಿ ವಿಭಾಗೀಯ ಲೇಖನಾ ಸಾಮಾಗ್ರಿ ಮತ್ತು ರಾಜ್ಯ ಪತ್ರ ಕಾರ್ಯಾಲಯ ಸರಸ್ವತಿ ಪುರಂ, ಮೈಸೂರು- ಇವರಿಗೆ ರಾಜ್ಯ ಪತ್ರದಲ್ಲಿ ಪ್ರಚುರ ಪಡಿಸುವ ಬಗ್ಗೆ ರವಾನಿಸಿದೆ.
8. ಆರ್.ಟಿ.ಎ ಸುತ್ತೋಲೆ ಕಡತಕ್ಕಾಗಿ.

Website: www.dk.nic.in Phone 0824-2220588 Fax: 0824-2441564 Email dc.mnglr@gmail.com

ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಉಡುಪಿ ಜಿಲ್ಲೆ, ಉಡುಪಿ ಇವರು ದಿನಾಂಕ 14.09.2022ರಂದು ಅಪರಾಹ್ನ 02.30 ಗಂಟೆಗೆ ನಡೆದ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು

1) ಶ್ರೀ.ಕೂರ್ಮಾರಾವ್ ಎಂ., ಭಾ.ಆ.ಸೇ.
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
ಉಡುಪಿ ಜಿಲ್ಲೆ, ಉಡುಪಿ

2) ಶ್ರೀ.ಹಾಕೆ ಅಕ್ಷಯ್ ಮಚ್ಚೀಂದ್ರ, ಭಾ.ಪೋ.ಸೇ.
ಪೋಲೀಸ್ ವರಿಷ್ಠಾಧಿಕಾರಿಗಳು ಹಾಗೂ ಸದಸ್ಯರು
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
ಉಡುಪಿ ಜಿಲ್ಲೆ, ಉಡುಪಿ

3) ಶ್ರೀ.ರವಿಶಂಕರ ಪಿ.,
ಪ್ರಭಾರ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ
ಪ್ರಭಾರ ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
ಉಡುಪಿ ಜಿಲ್ಲೆ, ಉಡುಪಿ

ಮತ್ತು ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಿದ ಆಟೋರಿಕ್ಷಾ ಚಾಲಕ ಮಾಲಕ ಸಂಘದವರು ಮತ್ತು ಸಾರ್ವಜನಿಕರು

- - -

1.ಆಟೋರಿಕ್ಷಾ ಪ್ರಯಾಣ ದರ ಪರಿಷ್ಕರಣೆ ಕುರಿತು:-

ಪ್ರಸ್ತಾವನೆ:-

ಕಳೆದ ಹಲವಾರು ವರ್ಷಗಳಿಂದ ಆಟೋ ಮೀಟರ್ ದರವು ಏರಿಕೆಯಾಗದೇ ಇದ್ದು ರಿಕ್ಷಾ ಚಾಲಕರು ಆರ್ಥಿಕವಾಗಿ ಸಂಕಷ್ಟದಲ್ಲಿದ್ದು ಮೀಟರ್ ದರವನ್ನು ಪ್ರಸ್ತುತ ಈಗ ರೂ.30/- ನಿಗದಿತ ದರ ಮತ್ತು ಪ್ರತಿ ಕಿ.ಮೀ. ಗೆ ರೂ.17/- ಇರುವುದನ್ನು ರೂ.40/- ನಿಗದಿತ ದರ ಮತ್ತು ಪ್ರತಿ ಕಿ.ಮೀ. ಗೆ ರೂ.20/- ರಂತೆ ದರ ಪರಿಷ್ಕರಿಸುವ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಉಡುಪಿ ಜಿಲ್ಲಾ ಆಟೋರಿಕ್ಷಾ ಚಾಲಕರ ಮತ್ತು ಮಾಲಕರ ಸಂಘಗಳ ಒಕ್ಕೂಟ (ರಿ), ಅಧ್ಯಕ್ಷರು ಹಾಗೂ ಉಡುಪಿ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ.ರಘುಪತಿ ಭಟ್ ರವರು ಮತ್ತು ವಿವಿಧ ಆಟೋರಿಕ್ಷಾ ಚಾಲಕ ಮಾಲಕರ ಸಂಘದವರು ಮನವಿ ಸಲ್ಲಿಸಿದ್ದು ಈ ವಿಷಯವನ್ನು ಪ್ರಾಧಿಕಾರದ ಮುಂದೆ ಮಂಡಿಸಲಾಗಿತ್ತು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸಭೆಯಲ್ಲಿರುವ ಎಲ್ಲರನ್ನೂ ಸ್ವಾಗತಿಸಿದರು. ಇಂಧನ ಬೆಲೆಗಳ ತುಲನಾತ್ಮಕ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಿದರು.

ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಉಡುಪಿ ರವರು ದಿನಾಂಕ 06.02.2020ರಂದು ನಿಗಧಿಪಡಿಸಿರುವ ದರ

| ಕನಿಷ್ಠ ದರ (1.5 ಕಿ.ಮೀಗೆ) | ನಂತರದ ಪ್ರತಿ ಕಿ.ಮೀ.ಗೆ |
|---|---|
| ರೂ.30.00 | ರೂ.17.00 |

## ತುಲನಾತ್ಮಕ ದರಪಟ್ಟಿ

| | ದಿನಾಂಕ 06.02.2020ರಂತೆ | ದಿನಾಂಕ 12.09.2022ರಂತೆ | ವ್ಯತ್ಯಾಸ |
|---|---|---|---|
| ಹೊಸ ಆಟೋರಿಕ್ಷಾ ಖರೀದಿ | ರೂ.2,07,000 | ರೂ.2,51,906 | (+) ರೂ.44,906 |
| ಎಲ್‌ಪಿಜಿ | ರೂ.47.57 | ರೂ.62.36 | (+) ರೂ.14.79 |
| ಪೆಟ್ರೋಲ್ | ರೂ.75.13 | ರೂ.101.44 | (+) ರೂ.26.31 |
| ಡೀಸೆಲ್ | ರೂ.67.93 | ರೂ.87.41 | (+) ರೂ.19.48 |
| ಆಯಿಲ್ | ರೂ.264 | ರೂ.303 | (+) ರೂ.39.00 |
| ವಿಮೆ | ರೂ.7962 | ರೂ.7962 | ಇರುವುದಿಲ್ಲ |

ಜಿಲ್ಲಾಧಿಕಾರಿಗಳು ಮಾತನಾಡಿ ಆಟೋರಿಕ್ಷಾ ಚಾಲಕ/ಮಾಲಕ ಸಂಘದವರು ಆಟೋರಿಕ್ಷಾ ದರ ಯಾಕೆ ಜಾಸ್ತಿ ಮಾಡಬೇಕು, ಎಷ್ಟು ಮಾಡಬೇಕು ಎಂದು ತಮ್ಮ ಅಹವಾಲುಗಳನ್ನು ತಿಳಿಸಬೇಕೆಂದರು.

ಶ್ರೀ.ಸುರೇಶ್ ಅಮೀನ್, ಉಡುಪಿ ಜಿಲ್ಲಾ ಆಟೋರಿಕ್ಷಾ ಚಾಲಕ ಮಾಲಕರ ಸಂಘಗಳ ಒಕ್ಕೂಟದ ಪರವಾಗಿ ಮಾತನಾಡಿ ಕಳೆದ ಎರಡು ವರ್ಷದಿಂದ ಕೊರೋನಾದಿಂದಾಗಿ ತುಂಬಾ ಆರ್ಥಿಕ ಸಂಕಷ್ಟಕ್ಕೆ ರಿಕ್ಷಾ ಚಾಲಕರು ಒಳಗಾಗಿದ್ದಾರೆ. ಸಿಎನ್‌ಜಿ ಇಂಧನ ಕಿಟ್ ಅಳವಡಿಸುವ ದರವು ರೂ.4,000/- ದಷ್ಟು ಖರ್ಚಾಗುತ್ತದೆ. ವಿಮೆಯು ಜಾಸ್ತಿಯಾಗಿದೆ. ಇಲಾಖೆಯವರ ದಂಡದ ಮೊತ್ತವೂ ಜಾಸ್ತಿಯಾಗಿದೆ. ಬಿಡಿಭಾಗಗಳ ಬೆಲೆ ಜಾಸ್ತಿಯಾಗಿದ್ದು ಅದಕ್ಕೆ ಜಿಎಸ್‌ಟಿ ಸೇರಿಸುತ್ತಾರೆ. ಆಟೋರಿಕ್ಷಾದ ಖರೀದಿ ದರವೂ ಜಾಸ್ತಿಯಾಗಿದೆಯೆಂದರು. ದಿನಬಳಕೆಯ ವಸ್ತುಗಳ ಬೆಲೆಯು ಜಾಸ್ತಿಯಾಗಿದ್ದು ಜೀವನ ವೆಚ್ಚ ದುಬಾರಿಯಾಗಿದ್ದು ಕುಟುಂಬ ನಡೆಸಲು ಕಷ್ಟಕರವಾಗಿದೆ. ಕನಿಷ್ಠ ದರವನ್ನು ರೂ.40/-ಕ್ಕೆ ನಿಗಧಿಪಡಿಸಬೇಕೆಂದು ಕೋರಿದರು.

ಆಟೋರಿಕ್ಷಾ ಚಾಲಕರೊಬ್ಬರು ಮಾತನಾಡಿ ಪೆಟ್ರೋಲ್ ಮತ್ತು ಡೀಸೆಲ್ ದರ ಶೇಕಡಾ 30 ರಿಂದ 40 ರಷ್ಟು ಜಾಸ್ತಿಯಾಗಿದೆ. ಈಗ ಜಿಎಸ್‌ಟಿ ಹಾಕುತ್ತಾರೆ. ಖಾಸಗಿ ಬಸ್ಸು ದರ ಕೆಎಸ್‌ಆರ್‌ಟಿಸಿ ದರ ಕಾಲ ಕಾಲಕ್ಕೆ ಏರಿಕೆಯಾಗಿದೆ ಆದರೆ ಆಟೋರಿಕ್ಷಾ ದರ ಏರಿಕೆಯಾಗಿಲ್ಲ. ಜೀವನ ವೆಚ್ಚ ಜಾಸ್ತಿಯಾಗಿದೆ. ಮಂಗಳೂರಿನಲ್ಲಿ ದರ ಜಾಸ್ತಿಯಾಗದಿದ್ದರೂ ಮಂಗಳೂರು ದೊಡ್ಡ ಪಟ್ಟಣ. ಮಂಗಳೂರಿಗೂ ಉಡುಪಿ ಪಟ್ಟಣಕ್ಕೂ ವ್ಯತ್ಯಾಸ ಇದೆ. ಅಲ್ಲಿನ ದರಕ್ಕೆ ತುಲನೆ ಮಾಡಬೇಡಿ. ಮಂಗಳೂರು ಮಹಾನಗರ ಪಾಲಿಕೆ. ಯಾವಾಗಲೂ ಉಡುಪಿಯಲ್ಲಿ ದರ ಪರಿಷ್ಕರಣೆಯಾದ ನಂತರ ಮಂಗಳೂರಿನಲ್ಲಿ ಆಗುತ್ತದೆ. ಇಲ್ಲಿ ಹಿಂದೆ ಬರುವಾಗ ಬಾಡಿಗೆ ಸಿಗುವುದಿಲ್ಲವೆಂದರು.

ಶ್ರೀ.ರಾಜು ದೇವಾಡಿಗ, ಕುಂದಾಪುರ ರವರು ಮಾತನಾಡಿ ಮಂಗಳೂರಿಗಿಂತ ಇಲ್ಲಿ ಗುಡ್ಡಗಾಡು ಪ್ರದೇಶ ಜಾಸ್ತಿ ಇದೆ. ನಮಗೆ ಆರೋಗ್ಯದಲ್ಲಿ ತೊಂದರೆಯಾದಲ್ಲಿ ಆಯುಷ್‌ಮಾನ್ ಕಾರ್ಡ್ ಖಾಸಗಿ ಆಸ್ಪತ್ರೆಯಲ್ಲಿ ಸೌಲಭ್ಯ ಸಿಗುತ್ತಿಲ್ಲ. ಇಎಸ್‌ಐ ಸೌಲಭ್ಯವನ್ನು ಕಲ್ಪಿಸಬೇಕು. ಈ ಹಿಂದೆ ಪ್ರಸ್ತಾವನೆ ಕೊಟ್ಟಿದ್ದೇವೆಂದರು.

ಮಣಿಪಾಲ ಇಂಡಸ್ಟ್ರಿಯಲ್ ಏರಿಯಾದ ಸಾರ್ವಜನಿಕರ ಪರವಾಗಿ ನಾಗರೀಕರೊಬ್ಬರು ಮಾತನಾಡಿ ಆಟೋರಿಕ್ಷಾ ದರಪರಿಷ್ಕರಣೆ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಉಡುಪಿ ಮತ್ತು ಇತರೆ ಕಡೆಗಳಿಂದ ಬಾಡಿಗೆಗೆ ಬಂದ ಆಟೋರಿಕ್ಷಾದವರಿಗೆ ಮಣಿಪಾಲ ರಿಕ್ಷಾ ನಿಲ್ದಾಣದಲ್ಲಿ ನಿಲುಗಡೆ ಮಾಡಲು ಅವಕಾಶ ನೀಡುತ್ತಿಲ್ಲ. ಅವರು ಖಾಲಿಯಾಗಿ ವಾಪಸ್ಸು ಹೋಗಬೇಕಾಗುತ್ತದೆ. ಮೊದಲು ಈ ಸಮಸ್ಯೆಯನ್ನು ಬಗೆಹರಿಸಿ ಎಂದರು.

ಯಶೋಧಾ ಆಟೋ ಯೂನಿಯನ್‌ನ ಶ್ರೀ.ಕೃಷ್ಣಮೂರ್ತಿ ಆಚಾರ್ಯರವರು ಮಾತನಾಡಿ ಕಳೆದ 10 ವರ್ಷಗಳ ಹಿಂದಿನ ಆಟೋರಿಕ್ಷಾ ದರಕ್ಕೂ ಈಗಿನ ದರಕ್ಕೂ ತುಂಬಾ ವ್ಯತ್ಯಾಸ ಇದೆ. ಬಿಡಿ ಭಾಗಗಳು, ಬಿಲ್, ಪೆಟ್ರೋಲ್, ಡೀಸೆಲ್, ಗ್ಯಾಸ್ ದರ ಹೆಚ್ಚಾಗಿದೆಯೆಂದರು. ಶಾಲಾ ಶುಲ್ಕ, ವಿದ್ಯುತ್ ಬಿಲ್ಲು, ದಿನಬಳಕೆ ವಸ್ತುಗಳ ದರವು ದುಬಾರಿಯಾಗಿದ್ದು ರಿಕ್ಷಾ ಚಾಲಕ/ಮಾಲಕರ ಖರ್ಚುಗಳು ಹೆಚ್ಚಿವೆಯೇ ಹೊರತು ಲಾಭ ದೊರೆತಿಲ್ಲ. ಕನಿಷ್ಠ ದರ ರೂ.40/- ನಿಗಧಿ ಮಾಡಿ, ರನ್ನಿಂಗ್ ದರ ಪ್ರತಿ ಕಿ.ಮೀ.ಗೆ ರೂ.20/- ನಿಗಧಿಪಡಿಸಲು ಒತ್ತಾಯಿಸಿದರು,.

ಶ್ರೀ.ಸಂತೋಷ್ ರಾವ್, ಕಾರ್ಕಳ ರಿಕ್ಷಾ ಚಾಲಕರ ಪರವಾಗಿ ಮಾತನಾಡಿ ನಾವು ಕನಿಷ್ಠ ಮಟ್ಟದ ಜೀವನ ನಡೆಸುತ್ತಿದ್ದೇವೆ. ಪ್ರಯಾಣಿಕರ ಮತ್ತು ನಮ್ಮ ನಡುವೆ ವಿಶ್ವಾಸದಿಂದ ನಡೆಯುತ್ತಿದೆ. ನಮಗೆ ಭದ್ರತೆ ಇಲ್ಲ. ಪೆಟ್ರೋಲ್/ಗ್ಯಾಸ್ ಬೆಲೆಗಳು ದಿನಸಿ ಮಾರ್ಕೆಟ್ ತರಹ ವ್ಯತ್ಯಯವಾಗುತ್ತಿರುತ್ತದೆಯೆಂದರು. ಸರ್ಕಾರದಿಂದ ನಮಗೆ ಭದ್ರತೆ ಇಲ್ಲ. ಸರ್ಕಾರದ ಸವಲತ್ತು ಸಿಗುತ್ತಿಲ್ಲ. ರಾತಿ ಹಗಲು ಕೆಲಸ ಮಾಡುತ್ತೇವೆ. ಸಾರ್ವಜನಿಕರಿಗೆ ಮನೆ ಬಾಗಿಲಿಗೆ ಸೇವೆ ನೀಡುತ್ತೇವೆ. ಮಕ್ಕಳ ವಿದ್ಯಾಭ್ಯಾಸ, ಆಸ್ಪತ್ರೆ ಖರ್ಚು, ಮನೆ ಇತ್ಯಾದಿ ಖರ್ಚುಗಳನ್ನು ನಿಭಾಯಿಸಲು ಕಷ್ಟವಾಗುತ್ತಿದೆಯೆಂದರು.

ರಿಕ್ಷಾ ಚಾಲಕರೊಬ್ಬರು ಮಾತನಾಡಿ ಅನಿವಾರ್ಯವಾಗಿ ನಾವು ರಿಕ್ಷಾದಲ್ಲಿ ದುಡಿಮೆ ಮಾಡಬೇಕಾಗಿದೆಯೆಂದರು. ನಗರ ಬಿಟ್ಟು ಹಳ್ಳಿಗಳ ಕಡೆಗೆ ಒಳದಾರಿ ರಸ್ತೆಗಳು ಸರಿಯಿಲ್ಲ, ಹಿಂದೆ ಬರುವಾಗ ಬಾಡಿಗೆ ಸಿಗುವುದಿಲ್ಲ, ಆಟೋ ನಿರ್ವಹಣೆ ಖರ್ಚು ಜಾಸ್ತಿಯಾಗುತ್ತಿದೆಯೆಂದರು. ಈಗಿರುವ ಆಟೋ ಸ್ಟಾಂಡ್‌ಗಳು ಚಿಕ್ಕದಿವೆ. ಇಲ್ಲಿ ಆಟೋರಿಕ್ಷಾಗಳು ತೊಂಬಿಕೊಂಡಿವೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಒನ್ ವೇ ಯಿಂದಾಗಿ ಸುತ್ತಿಕೊಂಡು ಬರಬೇಕು. ನಾವು ಹಿಂದೆ ಬರುವಾಗ ಜಾಸ್ತಿ ಕೇಳುವುದಿಲ್ಲವೆಂದರು.

ಜಿಲ್ಲಾಧಿಕಾರಿಗಳು ಮಾತನಾಡಿ ಆಟೋರಿಕ್ಷಾ ನಿಲ್ದಾಣಗಳ ಸಮಸ್ಯೆ ಬಗ್ಗೆ ಮುಂದಿನ ದಿನಗಳಲ್ಲಿ ಪ್ರತ್ಯೇಕ ಸಭೆ ಕರೆದು ನಿರ್ಧಾರ ಕೈಗೊಳ್ಳಲಾಗುವುದೆಂದರು.

ಪೊಲೀಸ್ ವರಿಷ್ಠಾಧಿಕಾರಿಗಳು ಮಾತನಾಡಿ ರಿಕ್ಷಾ ನಿಲ್ದಾಣಗಳ ಬಗ್ಗೆ ಜಂಟಿ ಸ್ಥಳ ಪರಿಶೀಲನೆ ನಡೆಸಿ ನೋಟಿಫಿಕೇಷನ್ ಹೊರಡಿಸಬಹುದು. ಸಾರ್ವಜನಿಕರಿಂದ ಯಾವುದೇ ದೂರು ಬಾರದಂತೆ ಆಟೋರಿಕ್ಷಾ ಚಾಲಕರು ಸೇವೆಯನ್ನು ನೀಡಬೇಕು. ದೂರು ಬಂದಲ್ಲಿ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದೆಂದರು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮಾತನಾಡಿ ಕನಿಷ್ಠ ರೂ.35/- ಮಾಡಿ, ನಂತರದ ಪ್ರತಿ ರನ್ನಿಂಗ್ ಕಿ.ಮೀ. ರೂ.20/- ನಿಗಧಿಪಡಿಸಬಹುದೆಂದರು.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಆಟೋರಿಕ್ಷಾ ಚಾಲಕರು ಕನಿಷ್ಠ ರೂ.35/- ನಿಗಧಿಪಡಿಸಿದಲ್ಲಿ ಚಿಲ್ಲರೆ ಸಮಸ್ಯೆಯಾಗುತ್ತದೆ. ಈಗ ಪೆಟ್ರೋಲ್, ಡೀಸೆಲ್, ಬಿಡಿಭಾಗಗಳ ದರ ಏರಿಕೆಯಾಗಿದ್ದು, ನಮ್ಮ ಜೀವನ ನಿರ್ವಹಣೆ/ಖರ್ಚು ಜಾಸ್ತಿಯಾಗಿದೆ, ಆಟೋರಿಕ್ಷಾಗಳ ವಿಮೆ ತುಂಬಾ ಹೆಚ್ಚಾಗಿರುವುದರಿಂದ ಆಟೋದರವನ್ನು ಕನಿಷ್ಠ ರೂ.40/- ದರ ನಿಗಧಿ ಮಾಡಿ, ನಂತರದ ಪ್ರತಿ ರನ್ನಿಂಗ್ ಕಿ.ಮೀ. ರೂ.20/- ನಿಗಧಿಪಡಿಸಬೇಕೆಂದರು ಒತ್ತಾಯಿಸಿದರು.

ಸಾರ್ವಜನಿಕರಿಂದ ಯಾವುದೇ ದರ ಪರಿಷ್ಕರಣೆ ಬಗ್ಗೆ ಯಾವುದೇ ಆಕ್ಷೇಪಣೆಗಳು ಸಭೆಯಲ್ಲಿ ಬಂದಿರುವುದಿಲ್ಲ.

ಜಿಲ್ಲಾಧಿಕಾರಿಗಳು ಮಾತನಾಡಿ ಎಲ್ಲಾ ಆಟೋರಿಕ್ಷಾ ಚಾಲಕ/ಮಾಲಕರು ಕಡ್ಡಾಯವಾಗಿ ಆಟೋಗಳಲ್ಲಿ ಮೀಟರ್ ಅಳವಡಿಸಿ ಆ ಪ್ರಕಾರವೇ ಪ್ರಯಾಣಿಕರಿಂದ ದರ ಪಡೆಬೇಕು. ಆಟೋ ಚಾಲಕರು ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಸೂಚಿಸಿದರು. ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಒದಗಿಸಬೇಕು. ಕಡ್ಡಾಯವಾಗಿ ಸಂಚಾರ ನಿಯಮಗಳ ಪಾಲನೆ ಮಾಡಬೇಕು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಿರುದ್ಧ ದಿಕ್ಕಿನಿಂದ ಬರಬಾರದು. ನಿಗಧಿತ ಸಂಖ್ಯೆಯ ಪ್ರಯಾಣಿಕರನ್ನು ಮಾತ್ರ ಕರೆದೊಯ್ಯಬೇಕು. ಶಾಲಾ ಮಕ್ಕಳನ್ನು ಕರೆದೊಯ್ಯುವಾಗ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ಒಳ್ಳೆಯ ಸೇವೆ ನೀಡಿ ಉಡುಪಿಯ ಘನತೆ ಹೆಚ್ಚಿಸಬೇಕೆಂದರು. ಆಟೋರಿಕ್ಷಾ ಚಾಲಕರು ಗುಂಪು ಗಲಾಟೆ ಮಾಡದೆ, ಯೂನಿಫಾರ್ಮ್ ಹಾಕಿಕೊಂಡು ಶಿಸ್ತಿನಿಂದ ಕರ್ತವ್ಯ ನಿರ್ವಹಿಸಬೇಕು. ಆಟೋರಿಕ್ಷಾಗಳಲ್ಲಿ ಸರಕು ಸಾಮಾಗ್ರಿಗಳನ್ನು ಸಾಗಿಸಬಾರದು. ರಕ್ಷಣೆ ವಿಷಯದಲ್ಲಿ ದೂರುಗಳು ಬಂದಲ್ಲಿ ಕಠಿಣ ಕ್ರಮ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

## ಆದೇಶ

**ಸಂಖ್ಯೆ:ಪ್ರಾಸಾಪ್ರಾ/ಉ/ಬಿ1/ಆಟೋದರ ನಿಗಧಿ/22-23, ದಿನಾಂಕ 14.09.2022**

ಮೇಲೆ ವಿವರಿಸಿರುವ ವಿಷಯಗಳಿಗೆ ಅನುಗುಣವಾಗಿ ಉಡುಪಿ ಜಿಲ್ಲಾ ಸಾರಿಗೆ ಪ್ರಾಧಿಕಾರವು ಆಟೋರಿಕ್ಷಾ ಪ್ರಯಾಣ ದರ ಪರಿಷ್ಕರಣೆಯ ವಿಷಯದ ಸಾಧಕ ಬಾಧಕಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾರ್ವಜನಿಕ ಪ್ರಯಾಣಿಕರ ಹಿತದೃಷ್ಟಿಯಿಂದ ಉಡುಪಿ ಜಿಲ್ಲೆಯಾದ್ಯಂತ ಎಲ್ಲಾ ಆಟೋ ರಿಕ್ಷಾದವರು ಕಡ್ಡಾಯವಾಗಿ ಮೀಟರ್ ಅಳವಡಿಸಿಕೊಂಡು ಅದನ್ನು ಕಡ್ಡಾಯವಾಗಿ ಚಾಲನೆ ಮಾಡಿ ಮೀಟರಿನಂತೆಯೇ ನ್ಯಾಯಯುತವಾದ ಪ್ರಯಾಣ ದರವನ್ನು ಅವರಿಂದ ಪಡೆದುಕೊಂಡು ತಮ್ಮ ಜೀವನವನ್ನು ನಿರ್ವಹಿಸಬೇಕಾಗಿರುವುದರಿಂದ ಎಲ್ಲಾ ನಿಟ್ಟನಲ್ಲೂ ಎರಡು ವರ್ಷದ ಹಿಂದೆ ನಿಗಧಿಪಡಿಸಿದ ದರವನ್ನು ಪುನರ್‌ಪರಿಶೀಲಿಸಿ ಮರು ಪರಿಷ್ಕರಿಸಿ ಈ ಕೆಳಗಿನಂತೆ ಆದೇಶವನ್ನು ಹೊರಡಿಸಿ ನಿರ್ಣಯ ಕೈಗೊಳ್ಳಲಾಗಿದೆ.

### ಪರಿಷ್ಕೃತ ದರಗಳು

| | | |
|---|---|---|
| 1 | ಕನಿಷ್ಟ ದರ (ಒಂದೂವರೆ ಕಿ.ಮೀಟರ್‌ಗೆ) | ರೂ.40.00 (ಗರಿಷ್ಟ 3 ಜನ ಪ್ರಯಾಣಿಕರು) |
| 2 | ನಂತರದ ಪ್ರತಿ ಒಂದು ಕಿ.ಮೀಟರ್‌ಗೆ | ರೂ.20.00 (ಗರಿಷ್ಟ 3 ಜನ ಪ್ರಯಾಣಿಕರು) |
| 3 | ಕಾಯುವ ಬಗ್ಗೆ ವಿಧಿಸುವ ದರ | ಮೊದಲ 15 ನಿಮಿಷದವರೆಗೆ ಉಚಿತ ನಂತರದ 15 ನಿಮಿಷಗಳಿಗೆ ರೂ.5.00 ಹಾಗೂ ಭಾಗದಂತೆ |
| 4 | ಪ್ರಯಾಣಿಕರ ಸರಕಿಗೆ (ಲಗೇಜ್) | 1) ಒಬ್ಬ ಪ್ರಯಾಣಿಕ ಕಡ್ಡಾಯವಾಗಿ ಜೊತೆ ಇರಬೇಕು<br>2) ಮೊದಲ 20 ಕಿ.ಗ್ರಾಂ ಗಳಿಗೆ ಉಚಿತ ಹಾಗೂ ನಂತರ ರೂ.5.00 ಹಾಗೂ ಭಾಗದಂತೆ |
| 5 | ರಾತ್ರಿ 10.00 ಗಂಟೆಯಿಂದ ಬೆಳಿಗ್ಗಿನ ಜಾವ 5.00 ಗಂಟೆಯ ವರೆಗೆ ಮಾತ್ರ ಈ ಮೇಲಿನ ದರದ ಒಂದೂವರೆ ಪಟ್ಟು ದರವನ್ನು ಪ್ರಯಾಣಿಕರಿಂದ ಪಡೆಯಲು ಅವಕಾಶವಿದೆ | |

ಆಟೋರಿಕ್ಷಾಗಳ ಪರಿಷ್ಕೃತ ದರವು ದಿನಾಂಕ 01.10.2022ರಿಂದ ಜಾರಿಯಾಗಲಿದ್ದು ಉಡುಪಿ ಜಿಲ್ಲೆಯ ಎಲ್ಲಾ ಆಟೋರಿಕ್ಷಾ ಚಾಲಕ/ಮಾಲಕರು ತಮ್ಮ ಆಟೋರಿಕ್ಷಾಗಳಿಗೆ ಕಾನೂನಿನ ಪ್ರಕಾರ ಅನುಮತಿ ಇರುವ ಫ್ಲಾಗ್ ಮೀಟರ್‌ನ್ನು ಕಡ್ಡಾಯವಾಗಿ ಅಳವಡಿಸಿಕೊಂಡು ಪರಿಷ್ಕೃತ ದರಕ್ಕೆ ಅನುಗುಣವಾಗಿ ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ದಿನಾಂಕ 31.10.2022ರ ಒಳಗೆ ರಿಕ್ಯಾಲೀಬರೇಷನ್ ಹಾಗೂ ಸೀಲ್ ಮಾಡಿಸಿಕೊಳ್ಳಲು ಆದೇಶಿಸಲಾಗಿದೆ. ತಪ್ಪಿದಲ್ಲಿ ಅಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಉಡುಪಿ ಇವರು ಪರಿಷ್ಕೃತ ದರದ ತುಲನಾತ್ಮಕ ಪಟ್ಟಿಯನ್ನು ತಯಾರಿಸಿ ಆಟೋರಿಕ್ಷಾ ಚಾಲಕ/ಮಾಲಕರ ಸಂಘದವರಿಗೆ ನೀಡುವಂತೆ ಸೂಚಿಸಲಾಗಿದೆ ಹಾಗೂ ಸದರಿ ಸಂಘದವರು ಈ ತುಲನಾತ್ಮಕ ಪಟ್ಟಿಯನ್ನು ತಮ್ಮ ಸಂಘದ ಎಲ್ಲಾ ಸದಸ್ಯರುಗಳಿಗೆ ಹಾಗೂ ಇತರ ಆಟೋ ರಿಕ್ಷಾ ಚಾಲಕರಿಗೆ ಸರಬರಾಜು ಮಾಡಿ ಅದೇ ಪಟ್ಟಿಯಂತೆ ಹಾಗೂ ಮೀಟರ್ ದರಕ್ಕನುಗುಣವಾಗಿ ಪ್ರಯಾಣಿಕರಿಂದ ಪ್ರಯಾಣ ದರವನ್ನು ಪಡೆದುಕೊಳ್ಳತಕ್ಕದೆಂದು ಆದೇಶಿಸಲಾಗಿದೆ. ಇದಕ್ಕೆ ತಪ್ಪಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನಿನಂತೆ ದಂಡ ವಿಧಿಸುವುದು/ಪರವಾನಿಗೆ ಅಮಾನತ್ತು/ರದ್ದತಿ ಕುರಿತು ಕ್ರಮ ಕೈಗೊಳ್ಳುವುದು ಹಾಗೂ ಇತರೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೆ ನಿರ್ದೇಶಿಸಲಾಗಿದೆ.

26/9.

(ಹಾಕೆ ಅಕ್ಷಯ್ ಮಚ್ಚೀಂದ್ರ)
ಸದಸ್ಯರು
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
ಹಾಗೂ ಪೋಲೀಸ್ ವರಿಷ್ಠಾಧಿಕಾರಿಗಳು
ಉಡುಪಿ ಜಿಲ್ಲೆ, ಉಡುಪಿ

(ಕೂರ್ಮಾರಾವ್ ಎಂ.)
ಅಧ್ಯಕ್ಷರು
ಪ್ರಾದೇಶಿಕ ಸಾರಿಗೆ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು
ಉಡುಪಿ ಜಿಲ್ಲೆ, ಉಡುಪಿ

COPY

Secretary
Regional Transport Authority
UDUPI DIST., UDUPI

ಅನುಬಂಧ - 3

ಕರ್ನಾಟಕ ಸರ್ಕಾರ

ಸಂ:ಟಿಡಿ 241 ಟಿಡಿಒ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:25-11-2022.

ಅಧಿಸೂಚನೆ

ಮೋಟಾರು ವಾಹನಗಳ ಅಧಿನಿಯಮ, 1988 (ಕೇಂದ್ರ ಅಧಿನಿಯಮ ಸಂಖ್ಯೆ 59/1988) ರ ಕಲಂ 67 ರ ಉಪಕಲಂ (1)(i). ರಡಿ ಪ್ರದತ್ತವಾದ ಅಧಿಕಾರದನ್ವಯ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 20349/2022, ದಿನಾಂಕ: 14.10.2022ರ ಮಧ್ಯಂತರ ಆದೇಶದನ್ವಯ ಅಗ್ರಿಗೇಟರ್ ನಿಯಮದ ಅಡಿಯಲ್ಲಿ ಆಟೋರಿಕ್ಷಾ ಅಗ್ರಿಗೇಟರ್ ಸೇವೆ ಒದಗಿಸುವ ಸಂಸ್ಥೆಗಳಿಗೆ ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಕಾಲಕಾಲಕ್ಕೆ ನಿಗಧಿಪಡಿಸಿರುವ ಆಟೋರಿಕ್ಷಾ ಪ್ರಯಾಣ ದರಗಳ ಮೇಲೆ, 5% ರಷ್ಟು ಸೇವಾ ಶುಲ್ಕ ಮತ್ತು ಅನ್ವಯಿಸುವ ಜಿ.ಎಸ್.ಟಿ ತೆರಿಗೆಯನ್ನು ಸೇರಿಸಿ ಅಂತಿಮ ಪ್ರಯಾಣದರ ನಿಗಧಿಪಡಿಸಲು ರಾಜ್ಯ ಸಾರಿಗೆ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ನಿರ್ದೇಶನ ನೀಡುವುದು ಅಗತ್ಯವೆಂದು ಸರ್ಕಾರವು ಪರಿಗಣಿಸಿ ಮೋಟಾರು ವಾಹನಗಳ ಅಧಿನಿಯಮ 1988ರ (ಕೇಂದ್ರ ಅಧಿನಿಯಮ 59/1988) ಕಲಂ 67ರ ಉಪ ಕಲಂ 1 (ಡಿ)(i) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯದ ಎಲ್ಲಾ ಸಾರಿಗೆ ಪ್ರಾಧಿಕಾರಗಳಿಗೆ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿದೆ.

ನಿರ್ದೇಶನಗಳು

ಆಟೋರಿಕ್ಷಾ ಅಗ್ರಿಗೇಟರ್ ಸೇವೆ ಒದಗಿಸಲು ಚಾಲ್ತಿಯಲ್ಲಿರುವ ಲೈಸೆನ್ಸ್ ಹೊಂದಿರುವ ಸಂಸ್ಥೆಗಳಿಗೆ, ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಕಾಲಕಾಲಕ್ಕೆ ನಿಗಧಿಪಡಿಸಿರುವ ಆಟೋರಿಕ್ಷಾ ಪ್ರಯಾಣ ದರಗಳ ಮೇಲೆ, ಶೇ. 5 ರಷ್ಟು ಸೇವಾ ಶುಲ್ಕ ಮತ್ತು ಅನ್ವಯಿಸುವ ಜಿ.ಎಸ್.ಟಿ ತೆರಿಗೆಯನ್ನು ಸೇರಿಸಿ ಅಂತಿಮ ಪ್ರಯಾಣದರ ನಿಗಧಿಪಡಿಸಲು ಕರ್ನಾಟಕ ರಾಜ್ಯದ ಎಲ್ಲಾ ಸಾರಿಗೆ ಪ್ರಾಧಿಕಾರಗಳಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
Pushpa V.S.
(ಪುಷ್ಪ ವಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ) / (ಇ & ಆರ್ಎಸ್ಎ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398 ಹಾಗೂ ಪ್ರಧಾನ ಮಹಾಲೇಖಪಾಲರು (ಎ &ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5359, ಬೆಂಗಳೂರು-560001.
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಟಿ.ಟಿ.ಎಂ.ಸಿ. ಸಂಕೀರ್ಣ, 1ನೇ ಮಹಡಿ, 'ಎ' ಬ್ಲಾಕ್, ಶಾಂತಿನಗರ, ಬೆಂಗಳೂರು-27.
3. ಬೆಂಗಳೂರು ನಗರ ಜಿಲ್ಲೆಗೆ ಅಪರ ಸಾರಿಗೆ ಆಯುಕ್ತರು/ ಜಂಟಿ ಸಾರಿಗೆ ಆಯುಕ್ತರು / ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು:- ಸಾರಿಗೆ ಆಯುಕ್ತರ ಮುಖಾಂತರ.
4. ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳ ಪತ್ರಾಂಕಿತ ಆಪ್ತ ಸಹಾಯಕರು, ಸಾರಿಗೆ ಇಲಾಖೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು / ಒ.ಡಿ.ಜಿ.ಸಿ.,

Scanned with CamScanner